₹ 5/-

# ನೇಸರು

## ಮೈಸೂರು ಅಸೋಸಿಯೇಷನ್ ಮುಂಬೈ

Nesaru **Tingalole** Vol XXXI -1 January 2013




ಬಿ. ವಿ. ಕಾರಂತ ನಾಟಕೋತ್ಸವ

**The Mysore Association, Bombay**
393, Bhau Daji Road, Matunga, Mumbai - 400 019.
Tel.: 2402 4647, 2403 7065 • Fax : 2401 0574
Email : mysoreassociation.mumbai@gmail.com

# ಬಿ. ವಿ. ಕಾರಂತ ನಾಟಕೋತ್ಸವ



**ಮೈಸೂರು ರಂಗಾಯಣದ ನಿರ್ದೇಶಕರಾದ ಡಾ. ಬಿ. ವಿ. ರಜಾರಾಂ, 'ಬಿ.ವಿ. ಕಾರಂತ ಜೀವನ ಸಾಧನೆ' ಛಾಯಾ ಚಿತ್ರ ಪ್ರದರ್ಶನವನ್ನು ಉದ್ಘಾಟಿಸುತ್ತಿರುವುದು. ಚಿತ್ರದಲ್ಲಿ ಶ್ರೀಮತಿ ರೋಹಿಣಿ ಹಟ್ಟಂಗಡಿ, ಶ್ರೀ ಕೆ.ಜಿ. ಕೃಷ್ಣಮೂರ್ತಿ, ಶ್ರೀ ಜಯರಾಮ್ ಪಾಟೀಲ್, ಶ್ರೀ ಕೆ. ಮಂಜುನಾಥಯ್ಯ, ಶ್ರೀ ರಾಮಭದ್ರ, ಶ್ರೀಮತಿ ರಮಾ ವಸಂತ್ ಮತ್ತಿತರರು.**

ಮೈಸೂರು ಅಸೋಸಿಯೇಶನ್ ಮುಂಬಯಿ ಸಂಸ್ಥೆ ಬಿ.ವಿ.ಕಾರಂತರಂಗ ಪ್ರತಿಷ್ಠಾನ ಬೆಂಗಳೂರು ಸಂಸ್ಥೆಯ ಸಹಯೋಗದೊಂದಿಗೆ ಆಯೋಜಿಸಿದ್ದ ಬಿ.ವಿ.ಕಾರಂತ ರಂಗ ನಮನ ರಾಷ್ಟ್ರೀಯ ನಾಟಕೋತ್ಸವ ಡಿ. 7ರಂದು ಉದ್ಘಾಟನೆಗೊಂಡಿತು.

ಮೊದಲಿಗೆ ಮೈಸೂರಿನ ರಂಗಾಯಣದ ನಿರ್ದೇಶಕರಾದ ಡಾ. ಬಿ.ವಿ. ರಾಜಾರಾಂ ಅವರು ಮುಖ್ಯ ಅತಿಥಿ ಶ್ರೀಮತಿ ರೋಹಿಣಿ ಹಟ್ಟಂಗಡಿ ಯವರ ಉಪಸ್ಥಿತಿಯಲ್ಲಿ ಬಿ.ವಿ.ಕಾರಂತರ ಜೀವನ ಸಾಧನೆಗಳ ಛಾಯಾಚಿತ್ರ ಪ್ರದರ್ಶನವನ್ನು ಉದ್ಘಾಟಿಸಿದರು.

ನಂತರದ ಸಭಾ ಕಾರ್ಯಕ್ರಮದಲ್ಲಿ ಅಸೋಸಿಯೇಷನ್‌ನ ಅಧ್ಯಕ್ಷ ವಿ. ರಾಮಭದ್ರಪ್ಪ, ರೋಹಿಣಿ ಹಟ್ಟಂಗಡಿ, ಮಂಜುನಾಥ್, ವೈ. ಡಿ. ವೆಂಕಟೇಶ್, ಜಯರಾಮ ಪಾಟೀಲ್ ಅತಿಥಿಗಳಾಗಿ ಉಪಸ್ಥಿತರಿದ್ದರು.

ಕಾರ್ಯಕ್ರಮದ ಉದ್ಘಾಟನೆಯ ನಂತರ ರೋಹಿಣಿ ಹಟ್ಟಂಗಡಿ



**ಮೈಸೂರು ಅಸೋಸಿಯೇಶನ್ನಿನೊಡನೆ ಸೇರಿ ಬಿ. ಕಾರಂತ ನಾಟಕೋತ್ಸವವನ್ನು ಆಯೋಜಿಸಿದ ಮೈಸೂರಿನ ಬಿ.ವಿ. ಕಾರಂತ ರಂಗಪ್ರತಿಷ್ಠಾನದ ಧರ್ಮದರ್ಶಿಗಳಾದ ಶ್ರೀ ಜಯರಾಮ್ ಪಾಟೀಲರು ಮೊದಲ ದಿನ ಡಿಸೆಂಬರ್ 7ರಂದು ಸಭೆಯನ್ನು ಪ್ರಾಸ್ತಾವಿಕವಾಗಿ ಉದ್ದೇಶಿಸುತ್ತಿರುವುದು.**

ಮಾತನಾಡುತ್ತ ಕಾರಂತರೊಂದಿಗಿನ ತಮ್ಮ ಅನುಭವವನ್ನು ಹಂಚಿಕೊಂಡರು.

ಅಂದು ಸಂಜೆ ಆಸಕ್ತ ಪುಣೆ ಕಲಾವಿದರಿಂದ ಮೋಹಿತ್ ಟಾಕಲ್ಕರ್ ಅವರ ನಿರ್ದೇಶನದ ಗಜಬ್ ಕಹಾನಿ ಮರಾಠಿ ನಾಟಕ ಪ್ರದರ್ಶನಗೊಂಡಿತು. ನೋಬೆಲ್ ಪ್ರಶಸ್ತಿ ವಿಜೇತ ಸಾಹಿತಿ ಜೋಸ್ ಸರಮಾಗೋ ಅವರ 'ದಿ ಎಲಿಫೆಂಟ್ ಜರ್ನಿ' ಕಾದಂಬರಿಯ ನಾಟಕ ರೂಪಾಂತರ ಮಾಡಿದವರು ಪ್ರದೀಪ ವೈದ್ಯ. ಈ ನಾಟಕ ಈಗಾಗಲೇ ಅನೇಕ ಕಡೆ ಪ್ರದರ್ಶನಗೊಂಡು ಉತ್ತಮ ವಿಮರ್ಶೆಯನ್ನು ಕಂಡಿದೆ.

ಮರುದಿನ ಡಿಸೆಂಬರ್ 8ರಂದು ಸಂಜೆ 6 ಗಂಟೆಗೆ ಮೊದಲಿಗೆ ಶ್ರೀ. ಸುಂದರ್ ರಾಜ್ ಮತ್ತು ತಂಡದವರಿಂದ ಕನ್ನಡದಲ್ಲಿ ಕಾರಂತ ಸಂಗೀತ ಮತ್ತು ನಂತರ ಅಮೋದ್ ಕೃಷ್ಣ ಭಟ್ ಮತ್ತು ತಂಡ ಹಿಂದಿಯಲ್ಲಿ ರಂಗಸಂಗೀತ ಪ್ರಸ್ತುತ ಪಡಿಸಿದರು. ಅನಂತರ ಗಿರೀಶ್ ಕಾರ್ನಾಡ್ ಅವರ ಕಥೆಯನ್ನಾಧಾರಿತ, ಬಿ.ವಿ.ಕಾರಂತರ ಸಂಗೀತದಿಂದ ಕೂಡಿದ ಅಲೋಕ್ ಚಟರ್ಜಿ ನಿರ್ದೇಶನದ



**'ಬಿ.ವಿ. ಕಾರಂತ ಜೀವನ ಸಾಧನೆ' ಛಾಯಾ ಚಿತ್ರ ಪ್ರದರ್ಶನದ ಒಂದು ನೋಟ**

ಭೋಪಾಲ್‌ನ ದೋಸ್ತ್ ತಂಡದ 'ಹಯವದನ' ಹಿಂದಿ ನಾಟಕ ಪ್ರದರ್ಶನಗೊಂಡಿತು.

ಮರುದಿನ ಡಿಸೆಂಬರ್ 9ರಂದು ಪೂರ್ವಾಹ್ನ 10.30ರಿಂದ ಶೈಲಶ್ರೀ ಮತ್ತು ಚಂದ್ರಶೇಖರ ಆಚಾರ್ ಅವರಿಂದ ಗೋಕುಲ ನಿರ್ಗಮನ ಬಿ ವಿ ಕಾರಂತರು ನಿರ್ದೇಶಿಸಿದ ಶೈಲಿಯಲ್ಲಿ ರಂಗಸಂಗೀತ ಕಾರ್ಯಕ್ರಮ ನಡೆಯಿತು. ಮೊದಲು ಶ್ರೀಮತಿ ವೈದೇಹಿಯವರ ಬಿ.ವಿ. ಕಾರಂತರ ಜೀವನವನ್ನಾಧಾರಿತ 'ಇಲ್ಲಿರಲಾರೆ ಅಲ್ಲಿಗೆ ಹೋಗಲಾರೆ' ಬಯೋಗ್ರಫಿ ಬಿಡುಗಡೆಗೊಂಡಿತು. ನಂತರ ರಾಮಭದ್ರ ಅವರು ಮೈಸೂರು ಅಸೋಶಿಯೇಶನ್ನಿನ ಪತ್ರಿಕೆ 'ನೇಸರು'ವಿನ ವಿಶೇಷ ಸಂಚಿಕೆಯನ್ನು ಬಿಡುಗಡೆಗೊಳಿಸಿದರು. ಲೇಖಕಿ ಶ್ರೀಮತಿ ವೈದೇಹಿ ಮಾತನಾಡುತ್ತಾ ತಾವು ಈ ಪುಸ್ತಕವನ್ನು ಬರೆಯಲು ಪಟ್ಟ ಶ್ರಮವನ್ನು ಮತ್ತು ಕಾರಂತರ ಉತ್ಸಾಹವನ್ನು ಹಂಚಿಕೊಂಡರು.

ಅನಂತರ ಸಂವಾದ ಕಾರ್ಯಕ್ರಮ ನಡೆದಿದ್ದು ಎಚ್. ಎಸ್. ಉಮೇಶ್, ಬಿ.ವಿ.ರಾಜರಾಮ್, ಕೆ.ಜಿ.ಕೃಷ್ಣಮೂರ್ತಿ, ಪ್ರೀಥಾ ಮಾಥೂರ್, ವೈದೇಹಿ, ಅತುಲ್ ತಿವಾರಿ, ಎಂ. ಕೆ. ಸುಂದರ್ ರಾಜ್ ಪಾಲ್ಗೊಂಡಿದ್ದರು. ಬಳಿಕ ಬಿ. ವಿ. ಕಾಮತ್ ಬಾಬಾ ಸಾಕ್ಷ್ಯಚಿತ್ರವು ಪಿ. ವಿ. ರಾಮಚಂದ್ರ ನಿರ್ದೇಶನದಲ್ಲಿ ಪ್ರದರ್ಶನಗೊಂಡಿತು.

ರಾತ್ರಿ ನಿರಂತರ ಮೈಸೂರು ಕಲಾವಿದರಿಂದ ಡಾ। ಚಂದ್ರಶೇಖರ ಕಂಬಾರರು ರಚಿಸಿರುವ ಚಿದಂಬರಾವ್ ಜಂಬೆ ಅವರ ನಿರ್ದೇಶನದಲ್ಲಿ 'ಶಿವರಾತ್ರಿ' ಕನ್ನಡ ನಾಟಕ ಪ್ರದರ್ಶನಗೊಂಡಿತು.

# ನೇಸರು
## ತಿಂಗಳೋಲೆ

ಸಂಪುಟ 30 ಜನವರಿ 2013 ಸಂಚಿಕೆ 12

ಗೌ. ಸಂಪಾದಕರು :
**ಡಾ. ಗಿರಿಜಾ ಶಾಸ್ತ್ರಿ**

ಸಂಪಾದಕ ಮಂಡಳಿ:
**ಡಾ. ಮಂಜುನಾಥ್**
**ಕೆ. ಮಂಜುನಾಥಯ್ಯ**
**ನಾರಾಯಣ ನವಿಲೇಕರ್**
**ಗಣಪತಿ ಶಂಕರಲಿಂಗ**
**ನೀಲಕಂಠ ಮೇಡರ್**

ಬೆಂಗಳೂರು ಪ್ರತಿನಿಧಿ :
**ಎಂ.ಎ.ಎನ್. ಪ್ರಸಾದ್**

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ. *- ಸಂ*

The views expressed by the contributors in this journal are theirs and not of the Association and the Association is not in anyway responsible for the same.
*- Ed.*

ಸಂಪರ್ಕ ವಿಳಾಸ :
**ನೇಸರು**
ಮೈಸೂರು ಅಸೋಸಿಯೇಷನ್
393, ಭಾವು ದಾಜಿ ರಸ್ತೆ,
ಮಾಟುಂಗ,
ಮುಂಬಯಿ-400 019.
✆ 24024647 / 2403 7065
Fax : 2401 0574
Email : mysoreassociation.mumbai@gmail.com
Website : www.mysoreassociation.in

## ಯತ್ರ ನಾರ್ಯಾಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ

"ನೋಡು ಹೆಣ್ಣು ಮಕ್ಕಳು ಮನೆಯಲ್ಲೇ ಇದ್ದಿದ್ದರೆ ಇದೆಲ್ಲಾ ಇರ್ತಿತ್ತಾ" ಎಂದು ಅವನು ಅವಳನ್ನು ರೇಗಿಸಿದ. ಅವಳಿಗೂ ಎಂಟು ಹತ್ತು ದಿನಗಳಿಂದ ಅದೇ ಅತ್ಯಚಾರದ ಸುದ್ದಿ, ಅದರ ವಿರುದ್ಧ ಆಂದೋಲನ ಎಲ್ಲವನ್ನೂ ಮಾಧ್ಯಮಗಳಲ್ಲಿ ಓದಿ, ನೋಡಿ, ಕೇಳಿ ತಲೆ ಚಿಟ್ಟು ಹಿಡಿದಿತ್ತು. ಇಂತಹ ಸುದ್ದಿಗಳು ಪತ್ರಿಕೆಗಳಿಗೆ ಅಪರೂಪವೇನೂ ಆಗಿರಲಿಲ್ಲ. ಆದರೆ ದಿಲ್ಲಿಯಲ್ಲಾದ ಕಾರಣ ಈ ಘಟನೆಗೆ ವಿಶೇಷ ಮಹತ್ವಬಂದು ಬಿಟ್ಟಿತ್ತು. ಈ ಸುದ್ದಿಯ ಪಕ್ಕದ ಕಾಲಂನಲ್ಲೇ, ಅತ್ಯಾಚಾರಕ್ಕೆ ಒಳಗಾದ ಪಂಜಾಬಿನ ಹುಡುಗಿಯೊಬ್ಬಳು ಆತ್ಮಹತ್ಯೆ ಮಾಡಿಕೊಂಡಿದ್ದಳು. ಅದರ ಬಗ್ಗೆ ಯಾರೂ ಸೊಲ್ಲೆತ್ತಲಿಲ್ಲ. ಒಂದು ದಿನವಾದರೂ ಇಂತಹ ಸುದ್ದಿಯಿಲ್ಲದ ಪತ್ರಿಕೆಗಳಿಲ್ಲ..... ಹೀಗೆ ನೂರಾರು ಸಾವಿರ ಘಟನೆಗಳು.... ಎಲ್ಲವೂ ಕೇವಲ ಸುದ್ದಿಯಾಗುವುವು.

"ಹುಡುಗಿಯರು ಮನೆಯೊಳಗೇ ಇರಬಹುದಿತ್ತು ನಿಜ. ಆದರೆ ಅಲ್ಲೂ ಅಪ್ಪ, ಅಜ್ಜ, ಚಿಕ್ಕಪ್ಪ, ಅಣ್ಣ ಎಲ್ಲಾ ಇರುತ್ತಾರಲ್ಲಾ..... ಪೇಪರ್‌ನಲ್ಲಿ ಬರುವ ಸುದ್ದಿ ಸುಳ್ಳಿರಬಹುದಾ?'' ಎಂದಳು ಅವಳು. ಯಾಕೆಂದರೆ ಅವು ಎಷ್ಟು ವಿಕೃತವಾಗಿರುತ್ತವೆ, ಎಂದರೆ ಯಾರೂ ನಂಬಲು ಸಾಧ್ಯವಾಗುವುದಿಲ್ಲ. ಹಿಂದೆ, ಕೂಡು ಕುಟುಂಬದಲ್ಲಿ ಜನ ಸುಖವಾಗಿ ಬದುಕುತ್ತಿದ್ದರು ಎಂದು ಗ್ರಹಿಸಬಹುದು, ಆದರೆ ಅಲ್ಲಿ ಏನು ನಡೆಯುತ್ತಿತ್ತೆಂದು ಯಾರಿಗೆ ಗೊತ್ತು? ಈಗ ಎಲ್ಲವೂ ಮಾಧ್ಯಮದ ಮೂಲಕ ಬೆಳಕಿಗೆ ಬರುತ್ತಿರುವುದರಿಂದ ಅವು ಜನರಿಗೆ ಗೊತ್ತಾಗುತ್ತಿವೆ.

"ಏನೇ ಆದ್ರೂ ಕಾಲ ಕೆಟ್ಟು ಹೋಯಿತು. ಹುಡುಗಿಯರೂ ಸ್ವಲ್ಪ ಗಂಭೀರವಾಗಿ ಬಟ್ಟೆ ಹಾಕ್ಕೊಂಡ್ರೆ..ಹೀಗೆಲ್ಲಾ ನಡೆಯೋದು ಕಮ್ಮಿ ಆಗಬಹುದು. ಹುಡುಗಿಯರು ತೊಂದರೆಯನ್ನು ಆಹ್ವಾನಿಸ್ತಾರೆ ಅನ್ನಿಸುತ್ತೆ"

"ಅಂದ್ರೆ ಹುಡುಗಿಯರು ಅರ್ಧ ಬಟ್ಟೆ ಹಾಕ್ಕೊಂಡ ಮಾತ್ರಕ್ಕೆ ಅವರು ಅತ್ಯಾಚಾರಕ್ಕೆ ಅರ್ಹರು ಅಂತಲೇ?. ಅದನ್ನು ನಿರ್ಧರಿಸೋರು ಯಾರು?, ಅಜ್ಜಿಯರು, ಹಸು ಕಂದಮ್ಮಗಳೂ ಇದರಿಂದ ಹೊರತಾಗಿಲ್ಲವಲ್ಲಾ ಅದಕ್ಕೇನು ಹೇಳ್ತೀ" ಪಾಟೀ ಸವಾಲು ಹಾಕಿದಳು ಅವಳು.

ಶೇಕಡಾ ನೂರರಲ್ಲಿ ಎಲ್ಲೋ ಒಂದು ಭಾಗದಷ್ಟು ಮೇಲು ವರ್ಗದ, ಓದಿದ, ನಗರಗಳಲ್ಲಿನ ಹುಡುಗಿಯರು ಅತ್ಯಾಧುನಿಕತೆಯ ಹೆಸರಲ್ಲಿ ಸ್ವೇಚ್ಛೆಯಾಗಿ ತಿರುಗಬಹುದು. ಆದರೆ ಉಳಿದ ಹೆಚ್ಚಿನ ಮಹಿಳೆಯರು ಗ್ರಾಮೀಣ ಪ್ರದೇಶಗಳಲ್ಲಿ ಬದುಕುವವರು, ಅನ್ನ, ಬಟ್ಟೆ, ತಲೆಮೇಲೊಂದು ಸೂರಿಗೆ ಹೋರಾಡುವವರು. ನಗರಗಳಲ್ಲಿ ಶೇಕಡಾ ಒಂದು ಭಾಗದಷ್ಟು ಮಹಿಳೆಯರು ನಡೆಸುವ ಉತಾವಳಿಯಿಂದಾಗಿ, ಒಟ್ಟು ಮಹಿಳಾ ಲೋಕ ಬಲಿಯಗಬೇಕಾಗಿದೆ. ಎಂತಹ ವಿಪರ್ಯಾಸ!

"ರಾತ್ರಿ ಹನ್ನೆರೆಡು ಗಂಟೆಯ ಹೊತ್ತಿನಲ್ಲಿ ಮಹಿಳೆಯರು ಒಂಟಿಯಾಗಿ ಎಂದು ತಿರುಗಲು ಸಾಧ್ಯವಾಗುತ್ತದೆಯೋ ಅಂದು ನಮಗೆ ನಿಜವಾದ ಸ್ವಾತಂತ್ರ್ಯ ಲಭಿಸಿದ ಹಾಗೆ!". ಎಂದು ಗಾಂಧೀಜಿ ಹೇಳಿದ್ದರು. ತಮ್ಮ ರಕ್ಷಣೆಯ ವಿಷಯಕ್ಕೆ ಮಹಿಳೆಯರು ಅಹಿಂಸಾ ವ್ರತವನ್ನು ಪಾಲಿಸುವುದು ಅಗತ್ಯವಿಲ್ಲವೆಂದೂ "ನಿಮಗೆ ದೇವರು ಹಲ್ಲು ಮತ್ತು ಉಗುರುಗಳನ್ನು ಕೊಟ್ಟಿಲ್ಲವೇ?" ಎಂದೂ, ತಮ್ಮ ವ್ರತವನ್ನು ಮುರಿದಿದ್ದರು. ಆ ಗಾಂಧೀ ಮಹಾತ್ಮ ಮಡಿದು ಇನ್ನೇನು ಅರವತ್ತೈದು ವರುಷಗಳಾಗುತ್ತ ಬಂದಿತು. ರಾತ್ರಿ ಹನ್ನೆರಡು ಗಂಟೆಯೇನು, ಹಗಲಿನ ಹನ್ನೆರಡು ಗಂಟೆಯಲ್ಲಿಯೂ ಮಹಿಳೆ ಸುರಕ್ಷಿತಳಾಗಿ ಓಡಾಡಲು ಸಾಧ್ಯವಾಗಿಲ್ಲ. ಅಷ್ಟೇ ಏಕೆ, ಎಷ್ಟೋ ಕಡೆ ಅವಳು ತಾನು ಹುಟ್ಟುವ ಹಕ್ಕನ್ನೂ ಕಳೆದುಕೊಂಡು ಬಿಟ್ಟಿದ್ದಾಳೆ. ನಾವು ಬಹಳ ಅಭಿವೃದ್ಧಿ ಹೊಂದಿದ್ದೇವೆಂದು ಜಂಭ ಕೊಚ್ಚಿಕೊಳ್ಳುತ್ತೇವೆ.

ನಾರಿಯರನ್ನು ಪೂಜಿಸುವ ಕಡೆ ದೇವತೆಗಳು ನಲಿದಾಡುತ್ತಾರಂತೆ.
ತಾಯಿಯನ್ನು ದೇವಿಯೆಂದು ಪೂಜಿಸಿದ ನಾಡು ನಮ್ಮದು.
ಆ ದೇವಿಯ ತ್ರಿಶೂಲಕ್ಕೆ ತುಕ್ಕು ಹಿಡಿದಿರಬೇಕು.
ಅವಳ ಸಿಂಹ ಕೋಮಾಕ್ಕೆ ಹೋಗಿರಬೇಕು !!!!!!

ಹೀಗೆ ನಾನು ಬರೆಯುವುದರಿಂದ ಯಾವ ವ್ಯತ್ಯಾಸವೂ ಆಗುವುದಿಲ್ಲ. ಹೊಸ ವರುಷದಲ್ಲಾದರೂ ಮನುಕುಲಕ್ಕೆ ವಿವೇಕದ ಉದಯವಾಗಲಿ. ಅಂಧಕಾರದಿಂದ ಬೆಳಕಿನೆಡೆಗೆ ಚಲಿಸೋಣ.

**– ಗಿರಿಜಾ ಶಾಸ್ತ್ರಿ**

# ವಿಧವಾ ವಿವಾಹ ಪ್ರವರ್ತಕ: ಗಡಿಯಾರಂ ರಾಮಕೃಷ್ಣ ಶರ್ಮ

ಶ್ರೀ ಗಡಿಯಾರಂ ರಾಮಕೃಷ್ಣಶರ್ಮರು ಬಹುಶ್ರುತರು ಹಾಗೂ ಬಹುಮುಖ ಪ್ರತಿಭಾನ್ವಿತರು. ಶರ್ಮರೇ ಬರೆದ 'ವಿದ್ಯಾರಣ್ಯ' ಪುಸ್ತಕದಲ್ಲಿ ಅವರ ಸಂಕ್ಷಿಪ್ತ ಪರಿಚಯವಿದೆ. ಇದಲ್ಲದೆ ಡಾ। ಶೇಷಶಾಸ್ತ್ರಿ ಎಂಬುವವರು ವಿಸ್ತಾರವಾದ ಪರಿಚಯವನ್ನೂ ಮಾಡಿಕೊಟ್ಟಿದ್ದಾರೆ. ಆದರೆ ಶರ್ಮರು ಮಾಡಿದ ಇನ್ನೊಂದು ಪ್ರಮುಖ ಸಾಧನೆಯ ಬಗ್ಗೆ ಎಲ್ಲಿಯೂ ಉಲ್ಲೇಖವಿಲ್ಲ. ನನಗೆ ತಿಳಿದ ಮಾಹಿತಿಯನ್ನು ನಿಮ್ಮ ಮುಂದೆ ಇಡುತ್ತೇನೆ.

1940 ರಲ್ಲಿ ಶರ್ಮರು ಗುರುಕುಲ ವಿದ್ಯಾಭ್ಯಾಸವನ್ನು ಮುಗಿಸಿ ತುರ್ತಾಗಿ ಅವರ ಅಕ್ಕನ ಊರಾದ ಅಲಂಪುರಕ್ಕೆ ಹೋಗಬೇಕಾಯಿತು. ಹೋದ ಮೇಲೆ ಕೋರ್ಟು, ಕಚೇರಿ ಹಾಗೂ ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಕೊಳ್ಳಬೇಕಾಯಿತು. ಆಗ ಅವರಿಗೆ 21 ವರ್ಷ.

ರೆಡ್ಡಿ ಜನಾಂಗಕ್ಕೆ ಸೇರಿದ 12 ವರ್ಷದ ಹುಡುಗಿ ಮದುವೆಯಾದ ಒಂದು ವಾರದಲ್ಲಿಯೇ ಕ್ಷಯ ರೋಗಿಯಾಗಿದ್ದ ಅವಳ ಗಂಡ ಸತ್ತು ಹೋಗಿ ವಿಧವೆಯಾದಳು. ಪದ್ಧತಿ ಪ್ರಕಾರ ಕೈಗೆ ಹಾಕಿಕೊಂಡಿದ್ದ ಬಳೆಯನ್ನು ಒಡೆದು ಹಾಕಿ ಬರೀ ಕೈಲಿ ಇರಬೇಕಾಗಿತ್ತು. ಅವಳು ಬಳೆಗಳನ್ನು ತೆಗೆಯಲು ಒಪ್ಪಲಿಲ್ಲ. ಹುಡುಗಿ ಎಷ್ಟು ಅಮಾಯಕಳೆಂದರೆ ಗಂಡ ಸತ್ತ ದುಃಖಕ್ಕಿಂತ ತಾನು ಬಳೆಗಳನ್ನು ತೊಡುವ ಹಾಗಿಲ್ಲವೆಂಬ ದುಃಖವೇ ಜಾಸ್ತಿಯಾಗಿತ್ತು! ಹುಡುಗಿಯ ತಂದೆ–ತಾಯಂದಿರು, ಊರ ಹಿರಿಯರು ಎಷ್ಟು ಹೇಳಿದರೂ ಅವಳು ಹಿಡಿದ ಪಟ್ಟನ್ನು ಸುತರಾಂ ಬಿಡಲಿಲ್ಲ.

ಅಲ್ಲಿನ ಪುರೋಹಿತರು ನರಕದ ಹಾಗೂ ಪಾಪದ ಭಯವನ್ನು ಹುಟ್ಟಿಸಿ ಪರಿಸ್ಥಿತಿಯನ್ನು ಇನ್ನಷ್ಟು ಬಿಗಡಾಯಿಸಿದ್ದರು. ಆಗ ಕೆಲವು ಹಿತೈಷಿಗಳು ಶರ್ಮರ ಹತ್ತಿರ ಬಂದು ಧರ್ಮಶಾಸ್ತ್ರ ಪ್ರಕಾರ ಬಳೆಗಳನ್ನು ತೆಗೆದು ಹಾಕಬೇಕೆ ಎಂದು ಅಭಿಪ್ರಾಯ ಕೇಳಿದರು. ಶರ್ಮರು ಗುರುಕುಲದಲ್ಲಿ ಧರ್ಮಶಾಸ್ತ್ರವನ್ನು ಅಧ್ಯಯನ ಮಾಡಿರಲಿಲ್ಲ. ಕೂಡಲೇ ಶರ್ಮರು ಮನು, ಯಾಜ್ಞವಲ್ಕ್ಯ, ಪರಾಶರ ಸ್ಮೃತಿಗಳನ್ನು ತರಿಸಿ ಕೂಲಂಕೂಷವಾಗಿ ಅಧ್ಯಯನ ಮಾಡಿ ಲೌಕಿಕ ಪದ್ಧತಿ ಪ್ರಕಾರ ಬಳೆಗಳನ್ನು ತೆಗೆದು ಹಾಕಿದರೂ ಅದಕ್ಕೆ ಶಾಸ್ತ್ರಾಧಾರವಿಲ್ಲವೆಂದು ನಿಖರವಾಗಿ ತಿಳಿಸಿ ಹುಡುಗಿಗೆ ಬಳೆಗಳನ್ನು ಹಾಕಿಕೊಳ್ಳಲು ಶರ್ಮರು ಅನುಕೂಲ ಮಾಡಿಕೊಟ್ಟರು.

ಪಕ್ಕದ ಹಳ್ಳಿ ನಿಡಿದೂರುನಲ್ಲಿ ಒಬ್ಬ ವೈಷ್ಣವ ಅರ್ಚಕ ತನ್ನ 12 ವರ್ಷದ ವಿಧವೆ ಮಗಳಿಗೆ ಮರು ಮದುವೆ ಮಾಡಲು ಬಹಳ ಪ್ರಯತ್ನಪಟ್ಟ. ಆದರೆ ಅವನಿಗೆ ಜನಬೆಂಬಲವಿರಲಿಲ್ಲ. ಮೇಲಾಗಿ ಶಾಸ್ತ್ರ ವಿರೋಧವೆಂದು ಬ್ರಾಹ್ಮಣರ ಸಮುದಾಯ ಗುಲ್ಲೆಬ್ಬಿಸಿತ್ತು. ಹತಾಶನಾಗಿ ಶರ್ಮರ ಸಹಾಯವನ್ನು ಯಾಚಿಸಿದ. "ಶಾಸ್ತ್ರ ಪ್ರಕಾರ ವಿಧವಾ ವಿವಾಹಕ್ಕೆ ವಿರೋಧವಿಲ್ಲ, ನಾನು ಬಂದು ನಿಂತು ಮದುವೆ ಮಾಡಿಸುತ್ತೇನೆ" ಎಂದು ಅರ್ಚಕನಿಗೆ ಧೈರ್ಯಕೊಟ್ಟರು. ಕೂಡಲೇ ವಿಧವಾ ವಿವಾಹದ ಬಗ್ಗೆ ಶಾಸ್ತ್ರಾರ್ಥ ಚರ್ಚೆ ಮಾಡಲು ಕೇಂದ್ರ ಪ್ರದೇಶವಾದ ರಾಮಾಪುರದಲ್ಲಿ ದಿನ, ಕಾಲ, ಸ್ಥಳವನ್ನು ಗೊತ್ತು ಮಾಡಿ ಸುತ್ತ ಮುತ್ತಣ ಪ್ರದೇಶಗಳ ಬ್ರಾಹ್ಮಣ ಸಮುದಾಯಕ್ಕೆ ಅಹ್ವಾನ ಕಳುಹಿಸಿದರು. ನಿಗದಿತ ದಿನ ಚರ್ಚೆಗೆ ಯಾರೂ ಬರಲಿಲ್ಲ. ಶ್ರೀ ಶರ್ಮರ ಮಾರ್ಗದರ್ಶನದಲ್ಲಿ ತನ್ನ ಮಗಳ ಲಗ್ನವು ನಡೆಯುತ್ತದೆ ಎಂದು ಅರ್ಚಕನು ಅಚ್ಚುಹಾಕಿಸಿ ಲಗ್ನ ಪತ್ರಿಕೆಗಳನ್ನು ಹಂಚಿದನು. ಅರ್ಚಕನ ಮಗಳ ಮರುವಿವಾಹ ಸಾಂಗವಾಗಿ ನೆರವೇರಿತು. ಮುಂದೆ ಅದೇ ರೀತಿಯಲ್ಲಿ ಶರ್ಮರು 5 ವಿಧವಾ ವಿವಾಹಗಳನ್ನು ಮಾಡಿಸಿದರು.

ಈ ಮಧ್ಯೆ ಶರ್ಮರಿಗೆ ಒಂದು ವಿಚಾರ ಬಂತು. "ನಾನು ಬೇರೆಯವರಿಗೆ ಶಾಸ್ತ್ರಾರ್ಥ ಹೇಳಿ ವಿಧವಾ ವಿವಾಹ ಮಾಡಿಸುತ್ತಿದ್ದೇನೆ. ಯಾರಾದರೂ ಸ್ವಾಮೀ, ನಿಮ್ಮ ಶಾಸ್ತ್ರ ಉಪದೇಶಗಳು ಬೇರೆಯವರಿಗೆ ಮಾತ್ರವೇ? ನಿಮಗೆ ಅನ್ವಯಿಸುವುದಿಲ್ಲವೆ? ನೀವು ಯಾಕೆ ವಿಧವಾ ವಿವಾಹ ಮಾಡಿಕೊಳ್ಳಬಾರದು? ಎಂದು ಕೇಳಬಹುದು. ನನ್ನ ಹತ್ತಿರ ಇದಕ್ಕೆ ಸರಿಯಾದ ಉತ್ತರವಿರುವುದಿಲ್ಲ. ಆದ್ದರಿಂದ ನಾನು ಇತರರಿಗೆ ಉಉಪದೇಶ ಮಾಡುವುದನ್ನು ನಾನೇ ಅನುಷ್ಠಾನಕ್ಕೆ ತಂದರೆ ಆತ್ಮವಂಚನೆ ಆಗುವುದಿಲ್ಲ ಹಾಗೂ ಜನರಿಗೆ ನನ್ನ ಮಾತಿನಲ್ಲಿ ವಿಶ್ವಾಸವಾಗುತ್ತದೆ" ಎಂದು ಭಾವಿಸಿ, ತಾನು ವಿವಾಹವಾದರೆ ವಿಧವೆ ಕನ್ಯೆಯನ್ನೇ ಮದುವೆ ಆಗುತ್ತೇನೆ ಎಂದು ತಮ್ಮ ಮಿತ್ರ ಹತ್ತಿರ ಘೋಷಿಸಿದರು.

ಅಲಂಪೂರಿನಲ್ಲಿಯೇ ಶರ್ಮರ ಭಾವನ ಸಂಬಂಧಿ 'ಕಮಲಾ' ಎಂಬ ಸ್ಫುರದ್ರೂಪಿ ಹಾಗೂ ಗುಣವತಿ ಹುಡುಗಿ ಇದ್ದಳು. ಅವಳಿಗೆ 7ನೇ ವರ್ಷಕ್ಕೆ ಮದುವೆ ಆಗಿ ಗಂಡು ಸತ್ತು 9ನೇ ವರ್ಷಕ್ಕೆ ಬಾಲವಿಧವೆ ಆಗಿದ್ದಳು. ಅವಳು ಶರ್ಮರ ಮನೆಗೆ ನಿತ್ಯ ಬಂದು ಶರ್ಮರ ತಾಯಿಗೆ ಮನೆ ಕೆಲಸಕಾರ್ಯಗಳಲ್ಲಿ ಸಹಾಯ ಮಾಡಿ ಅಚ್ಚು ಮೆಚ್ಚಿನ ಹುಡುಗಿಯಾಗಿದ್ದಳು. ಶರ್ಮರು ಅವಳನ್ನು ಮೊದಲು ನೋಡಿದಾಗ ಅವಳ ವಯಸ್ಸು 12. ಮುಂದೆ ಒಂದು ದಿನ ಶರ್ಮರ ತಾಯಿ ಶರ್ಮರಿಗೆ 'ಈ ಹುಡುಗಿ ಒಳ್ಳೆ ಶೀಲವತಿ. ಯಾವುದಾದರೂ ಒಳ್ಳೆ ಗಂಡು ನೋಡಿ ಮರುಮದುವೆ ಮಾಡಿಸು" ಎಂದು ಹೇಳಿದರು. 'ಆಗಲಿ'

✍ ಕೆ.ಆರ್.ಮೋಹನ್

ಎಂದು ಹೇಳಿ ಶರ್ಮರು ಸುಮ್ಮನಾದರು. ಮುಂದೆ ಎರಡು ವರ್ಷದ ನಂತರ ಮದುವೆಯಾಗಲು ಅವರ ತಾಯಿ ಶರ್ಮರ ಮೇಲೆ ಒತ್ತಾಯ ಮಾಡಿದಾಗ, "ಅಮ್ಮ, ಬೇರೆಯವರನ್ನು ಯಾಕೆ ಹುಡುಕಬೇಕು? ಕಮಲ ಎಂಬ ವಿಧವಾ ಕನ್ಯೆಯನ್ನೇ ಮದುವೆ ಆಗುತ್ತೇನೆ" ಎಂದು ಶರ್ಮರು ಹೇಳಿದರು. ಮಗನ ಉತ್ತರ ಕೇಳಿ ತಾಯಿ ಹೌಹಾರಿದರು. 'ನೀನು ಸಂಪ್ರದಾಯ ಮುರಿದು ವಿಧವಾ ಕನ್ಯೆಯನ್ನು ಮದುವೆ ಆದರೆ ನಾವೆಲ್ಲಾ ಕಷ್ಟವನ್ನು ಅನುಭವಿಸಬೇಕಾಗುತ್ತದೆ" ಎಂದು ಹೇಳಿದರು. 'ಅಮ್ಮ, ನೀನೆ ಹೇಳುತ್ತಿ "ಹುಡುಗಿ ಲಕ್ಷಣವಾಗಿದ್ದಾಳೆ". ಹಾಗಿದ್ದಲ್ಲಿ ಅವಳನ್ನು ಯಾಕೆ ನಿನ್ನ ಸೊಸೆಯನ್ನಾಗಿ ಮಾಡಿಕೊಳ್ಳಬಾರದು? ಎಂದು ಕೇಳಿದರು. ಅವರ ತಾಯಿಯ ಮನಸ್ಸನ್ನು ಒಪ್ಪಿಸಲು ಹಲವು ತಿಂಗಳು ಬೇಕಾಯಿತು.

ಮುಂದೆ ಅಂದರೆ 1943 ರಲ್ಲಿ ಅಲಂಪೂರಿನಲ್ಲಿ ಶರ್ಮರ ಹಾಗೂ ಅವರ ಸ್ನೇಹಿತರ ಪ್ರಯತ್ನಗಳಿಂದ ಆಂಧ್ರ ಮಹಾಸಭೆಯ ಅಧಿವೇಶನ ಜರುಗಲು ಏರ್ಪಾಡಾಯಿತು. ನಿಜಾಂ ಪ್ರಾಂತದಲ್ಲಿ ಆಂಧ್ರ ಮಹಾಸಭೆಯು ರಾಷ್ಟ್ರೀಯ ಕಾಂಗ್ರೆಸ್‌ನ ಇನ್ನೊಂದು ರೂಪಾಂತರ. ಈ ಅಧಿವೇಶನ ನಡೆಸಲು ಸರ್ಕಾರದ ಅನುಮತಿ ಇರಲಿಲ್ಲ. ಆದ್ದರಿಂದ ಶರ್ಮ ಹಾಗೂ ಅವರ ಸ್ನೇಹಿತರನ್ನು ದಸ್ತಗಿರಿ ಮಾಡುವ ಸಾಧ್ಯತೆ ಇತ್ತು. ಅಧಿವೇಶನದ ಸಂದರ್ಭದಲ್ಲಿಯೇ ಶರ್ಮರು ವಿವಾಹವಾದರೆ, ವಿಧವಾ ವಿವಾಹ ಸುಧಾರಣಾ ಕಾರ್ಯಕ್ರಮಕ್ಕೆ ಒಳ್ಳೆಯ ಪ್ರಚಾರ ಸಿಗುತ್ತದೆ ಎಂದು ಅವರ ಸ್ನೇಹಿತರು ಅಭಿಪ್ರಾಯಪಟ್ಟರು. ಸ್ನೇಹಿತರ ಒತ್ತಾಯ ಮತ್ತು ಇಚ್ಛೆಗೆ ಮಣಿದು ಅಧಿವೇಶನ ಪ್ರಾರಂಭವಾಗುವ 2 ಗಂಟೆ ಮುಂಚೆ ತುರಾತುರಿಯಲ್ಲಿ ವಿಧವೆಯಾಗಿದ್ದ ಕಮಲಳನ್ನು ವಿವಾಹವಾದರು. ಆಗ ಅವರಿಗೆ 24 ವರ್ಷ. ಕನ್ಯೆಗೆ 16 ವರ್ಷ. ಕ್ರಮೇಣ ಶರ್ಮರ ತಂದೆ, ಅವರ ತಾಯಿ, ಅಕ್ಕ ನವವಧುವನ್ನು ಮುಕ್ತ ಮನಸ್ಸಿನಿಂದ ಸ್ವೀಕರಿಸಿದರು. ಮೂರು ವರ್ಷಗಳ ಅವಧಿಯಲ್ಲಿ ಶರ್ಮರು ಸಾಹಿತ್ಯ,

*(ಪುಟ 7ಕ್ಕೆ)*

# ಗಿರಿಬಾಲೆ – ಒಂದು ನೆನಪು

ನಾನು ಸ್ನಾತಕೋತ್ತರ ಕೇಂದ್ರ ಮಂಗಳ ಗಂಗೋತ್ರಿಯಲ್ಲಿ ಅಧ್ಯಯನ ಮಾಡುತ್ತಿದ್ದಾಗ ನಮ್ಮ ತಂಡದ ವಿದ್ಯಾರ್ಥಿಗಳು ಉಡುಪಿ, ಮಲ್ಪೆಗೆ ನಮ್ಮ ಎಲ್ಲಾ ಗುರುಗಳೊಂದಿಗೆ ಪ್ರವಾಸ ಕೈಗೊಂಡಿದ್ದೆವು. ಉಡುಪಿಯಲ್ಲಿ ಶ್ರೀಕೃಷ್ಣನ ದರ್ಶನ ಪಡೆದು ಮತ್ತೆ ಮಲ್ಪೆಗೆ ಹೊರಡುವ ವೇಳೆಗೆ ನಮ್ಮ ಪ್ರೊ। ಎಸ್. ವಿ. ಪರಮೇಶ್ವರ ಭಟ್ಟರು ನಮ್ಮಿಂದ ಬೇರೆಯಾಗಿ ಮತ್ತೆ ನಮ್ಮನ್ನು ಮಲ್ಪೆಯಲ್ಲಿ ಸೇರಿಕೊಂಡರು. ಅವರು ಆ ವೇಳೆ ಶ್ರೀಮತಿ ಸರಸ್ವತಿ ಬಾಯಿ ರಾಜವಾಡೆ ಎಂಬ ಹಿರಿಯ ಲೇಖಕಿಯ ಭೇಟಿಗೆ ಹೋಗಿದ್ದರು ಎಂದು ತಿಳಿಯಿತು. ಈ ಸಂದರ್ಭ 1973 ರ ವೇಳೆಯದ್ದು. ಆ ಬಳಿಕ ಮುಂದಿನ ತರಗತಿಗಳಲ್ಲಿ ಆಗಾಗ ಸರಸ್ವತಿ ಬಾಯಿ ರಾಜವಾಡೆಯವರ ಬಗೆಗೆ ಪ್ರೊ। ಎಸ್‌ವಿಪಿಯವರು ಅವರದೇ ಆದ ಸರಸಶೈಲಿಯಲ್ಲಿ, ಅವರ ಬದುಕಿನ ಕೆಲವು ಸಂಗತಿಗಳನ್ನು ಬಹು ರೋಚಕವಾದ ರೀತಿಯಲ್ಲಿ ಹೇಳುತ್ತಿದ್ದರು. ಹಾಗೆಯೇ ಸಾಹಿತ್ಯದ ಬರವಣಿಗೆಗಳ ಬಗೆಗೆ, ಅವರ ಅಸಾಧಾರಣ ಧೈರ್ಯದ ಬಗೆಗೆ, ನೇರವಾದ ನಡೆನುಡಿಗಳ ಬಗೆಗೆ ಮೆಚ್ಚುಗೆಯ ಮಾತುಗಳನ್ನು ಹೇಳುತ್ತಿದ್ದರು. ಅವುಗಳಲ್ಲಿ ಬಹುಮುಖ್ಯವಾದುದು ಅತ್ಯಂತ ಬಡವಿಯಾದ, ಅತ್ಯಂತ ಚೆಲುವೆಯಾದ ಬಾಲಕಿ ಸರಸ್ವತಿ ಮುದಿಪ್ರಾಯದ ಶ್ರೀಮಂತ ಹಾಗೂ ದೊಡ್ಡ ಹುದ್ದೆಯ ಅಧಿಕಾರಿಯೊಂದಿಗೆ ಮದುವೆಯಾದುದು. ಗಂಡನ ಪ್ರೋತ್ಸಾಹದಿಂದ ಹಲವಾರು ಭಾಷೆಗಳನ್ನು ಕಲಿತು ಸಾಹಿತ್ಯ ಸಾಧನೆ ಮಾಡಿದುದು. ಗಂಡನ ಅವಸಾನದ ಬಳಿಕ ಉಡುಪಿಗೆ ಹಿಂತಿರುಗಿದುದು, ಸಾಹಿತ್ಯ ರಚನೆಗೆ ತೊಡಗಿದುದು, ಪತ್ರಿಕೆ ನಡೆಸಿದುದು, ಪತ್ರಿಕೆಗಳಿಗೆ ಅಂಕಣ ಬರಹ ಬರೆಯುತ್ತಿದ್ದುದು, ಅವುಗಳ ಮೂಲಕ ಸಾಮಾಜಿಕ, ಧಾರ್ಮಿಕ ಮೌಢ್ಯಗಳಿಗೆ ಇದಿರೇಟು ಕೊಟ್ಟಿದ್ದು ಇತ್ಯಾದಿ. ರಾಷ್ಟ್ರಕವಿ ಗೋವಿಂದ ಪೈಗಳನ್ನು ತನ್ನ ಗುರುಗಳೆಂದು ಭಾವಿಸಿಕೊಂಡು ಏಕಲವ್ಯ ಭಕ್ತಿಯಿಂದ ನಡೆದುಕೊಳ್ಳುತ್ತಿದ್ದುದು, ತನ್ನ ಪ್ರಶ್ನೆಗಳಿಗೆ ಅವರಿಂದ ಉತ್ತರಗಳನ್ನು ಪಡೆಯುತ್ತಿದ್ದುದು. ಹಾಗೆಯೇ ಅಂದಿನ ತಲೆಮಾರಿನ ಅನೇಕ ಹಿರಿಯ ಸಾಹಿತಿಗಳು ಘಟ್ಟ ಇಳಿದು ಬಂದರೆ ತಪ್ಪದೆ ಸರಸ್ವತಿ ಬಾಯಿ ರಾಜವಾಡೆಯವರನ್ನು ಕಾಣದೆ ಹೋಗುತ್ತಿರಲಿಲ್ಲ. ಹಾಗೆಯೇ ಒಂದು ಪ್ರಸನ್ನ ನಗುವಿನೊಂದಿಗೆ ಆ ವಯಸ್ಸಿನಲ್ಲಿ ಅಂದರೆ ಇಳಿ ವಯಸ್ಸಿನಲ್ಲೂ ಅವರು ಅತ್ಯಂತ ಚೆಲುವೆ ಎನ್ನುತ್ತಿದ್ದರು.

ಹೀಗೆ ಸರಸ್ವತಿಬಾಯಿ ರಾಜವಾಡೆ (ಗಿರಿಬಾಲೆ) ಯವರ ಬಗೆಗೆ ಒಂದು ರೀತಿಯ ಕುತೂಹಲ ಮಿಶ್ರಿತವಾದ ಗೌರವ ಉಂಟಾಗಿತ್ತು ನನಗೆ. ಅವರ ಯಾವ ಕೃತಿಗಳೂ ಓದುವುದಕ್ಕೆ ಲಭ್ಯವಿರಲಿಲ್ಲ. ಮುಂದೆ ಕೆಲವು ವರ್ಷಗಳ ಬಳಿಕ ಇದೇ ಹಿರಿಯ ಲೇಖಕಿಯವರೊಂದಿಗೆ ಬೆಂಗಳೂರಿನಲ್ಲಿ ನಡೆದ ಸಮ್ಮೇಳನಕ್ಕೆ ಮಾಡಿದ ಜತೆಗಿನ ಪ್ರಯಾಣವು ಈಗ ಊಹಿಸಲೂ ಸಾಧ್ಯವಿಲ್ಲದ ವಿಚಾರ. 1989 ರಲ್ಲಿ ಕರ್ನಾಟಕ ಲೇಖಕಿಯರ ಸಂಘವು 2ನೆಯ ಅಖಿಲ ಕರ್ನಾಟಕ ಲೇಖಕಿಯರ ಸಾಹಿತ್ಯ ಸಮ್ಮೇಳನವನ್ನು ಬೆಂಗಳೂರಿನಲ್ಲಿ ಹಮ್ಮಿಕೊಂಡಿತ್ತು. ಸಮ್ಮೇಳನದ ಅಧ್ಯಕ್ಷತೆಯ ಗೌರವ ನಮ್ಮ ಜಿಲ್ಲೆಯ ಹಿರಿಯ ಲೇಖಕಿ ಪದ್ಮಾ ಶೆಣೈ ಅವರಿಗೆ ದೊರಕಿತು. ಕೀರ್ತಿಶೇಷ ಲೇಖಕಿಯರ ಪಟ್ಟಿಯಲ್ಲಿ ಸೇರಿ ಹೋಗಿದ್ದ ಗಿರಿಬಾಲೆ ಜೀವಂತರಾಗಿದ್ದ ವಿಷಯ 1987 ರಲ್ಲಿ ಕ.ಲೇ.ಸಂ. ಬೆಂಗಳೂರಿನ ಲೇಖಕಿಯರಿಗೆ, ಇತರ ಹಿರಿಯ ಲೇಖಕರಿಗೆ ತಿಳಿಯಿತು. ಈ ಹಿನ್ನೆಲೆಯಲ್ಲಿ ಬೆಂಗಳೂರಿನಲ್ಲಿ ನಡೆದ 2ನೆಯ ಸಮ್ಮೇಳನದಲ್ಲಿ ಸನ್ಮಾನಗೊಳ್ಳಲು ಹಿರಿಯ ಲೇಖಕಿ 76 ವಯಸ್ಸಿನ ಗಿರಿಬಾಲೆಯವರೂ ಭಾಗವಹಿಸಬೇಕಾಗಿತ್ತು. ಈ ಇಬ್ಬರನ್ನೂ ಕರೆದೊಯ್ಯುವ ವ್ಯವಸ್ಥೆಯನ್ನು ಸಂಘದ ಅಧ್ಯಕ್ಷರಾದ ಹೇಮಲತಾ ಮಹಿಷಿಯರು ವೈದೇಹಿ ಮತ್ತು ನನಗೆ ವಹಿಸಿಕೊಟ್ಟಿದ್ದರು. ಇಬ್ಬರು ಹಿರಿಯ ಲೇಖಕಿಯರ ಜತೆಗೆ ನಮ್ಮ ಪ್ರಯಾಣ ಬೆಂಗಳೂರಿಗೆ. ಗಿರಿಬಾಲೆಯವರನ್ನೂ ಬೆಂಗಳೂರಿಗೆ ಹೊರಡಿಸುವ ಕೆಲಸ ಅಷ್ಟು ಸುಲಭ ಸಾಧ್ಯವಾಗಿರಲಿಲ್ಲ. ಕಾರಣ ಸಾಹಿತ್ಯ ಲೋಕಕ್ಕೆ ಸತ್ತಿದ್ದಾರೆ ಎಂದೇ ತಿಳಿದ ಗಿರಿಬಾಲೆ ಸ್ವತಃ "ಆ ಗಿರಿಬಾಲೆ ಸತ್ತಿದ್ದಾಳೆ. ನಾನು ಶಾರದಾಂಬೆಯ ಭಕ್ತೆ" ಎಂದು ಹೇಳುತ್ತಾ ಚಿಟ್ಪಾಡಿಯಲ್ಲಿ ಶಾರದಾಂಬ ದೇವಸ್ಥಾನವನ್ನು ನಿರ್ಮಿಸಿ, ತನ್ನ ಗಂಡನ ಮನೆಗೆ ದೊರೆತ ಶಾರದಾ ದೇವಿಯ ವಿಗ್ರಹವನ್ನು ಪ್ರತಿಷ್ಠಾಪಿಸಿ, ಬಂದ ಭಕ್ತಾದಿಗಳಿಗೆ ಅಭಯಹಸ್ತ ನೀಡುವ ಸಾಕಾರ ಶಾರದೆಯೇ ಆಗಿ ದರ್ಶನ ನೀಡುತ್ತಿದ್ದ ಸಂದರ್ಭ. ವೈದೇಹಿಯ ಪ್ರಯತ್ನ ಸಫಲವಾಯ್ತು.

ದಾರಿಯುದ್ದಕ್ಕೂ ಈ ಶುಭ್ರವಸನೆ ಶ್ವೇತ ವಸ್ತ್ರಧಾರಿಣಿ ಶಾರದಾಂಬೆ, ನಮ್ಮ ಸಾಹಿತಿ ಗಿರಿಬಾಲೆಯನ್ನು ಮಾತನಾಡಿಸಲು ನನಗೋ ಅಳುಕು. ಆದರೆ ವೈದೇಹಿ ಚಿನಕುರಳಿಯಂತೆ ಈ ಅಮ್ಮನನ್ನು ಸರಸವಾಗಿ ಕಿಣಕಿ, ಕೆದಕಿ ಮಾತನಾಡಿಸಿದರೆ ಅವರ ಬದುಕಿನ ಪುಸ್ತಕದ ಯಾವ್ಯಾವುದೋ ಅಧ್ಯಾಯಗಳ ಯಾವ್ಯಾವುದೋ ಪುಟಗಳ ಪರಿಚಯ ನಮಗಾಗುತ್ತಿತ್ತು. ಅರ್ಧ ಅರ್ಧ ಕತೆಗಳನ್ನು ಘಟನೆಗಳನ್ನು ನಾವು ಜೋಡಿಸಿಕೊಂಡು ಅರ್ಥ ಮಾಡಿಕೊಳ್ಳುತ್ತಿದ್ದೆವು. ಪ್ರೊ। ಎಸ್.ವಿ.ಯವರು ಹೇಳಿದ ಕತೆಗಳ ಘಟನೆಗಳ ಸಂದರ್ಭ, ಹಿನ್ನೆಲೆಗಳೂ ನನಗೆ ದೊರೆತು ಅವುಗಳು ನಿಜವಾದಂತೆ ಕಣ್ಮುಂದೆ ಸುಳಿಯಿತು. ಅವರ ಪ್ರಗತಿಪರ ಧೋರಣೆ, ಆ ಅನ್ಯಾಯದ ವಿರುದ್ಧ ಪ್ರಕಟವಾಗುತ್ತಿದ್ದ ರೋಷ, ಜೀವನಾನುಭವದ ಹಿನ್ನೆಲೆಯ ಲೋಕಾಭಿರಾಮದ ಸುದ್ದಿಗಳು, ಕಾಲಹರಣದ ಹರಟೆಗಳಾಗದೆ ಸಾಹಿತ್ಯ, ಸಮಾಜ, ಧರ್ಮ ಇತ್ಯಾದಿಗಳ ಸುತ್ತಲೇ ಗಿರಕಿ ಹೊಡೆಯುತ್ತಿತ್ತು. ಜತೆಗೆ ಆ ವಯಸ್ಸಿನಲ್ಲಿ ಅವರ ಜೀವನೋತ್ಸಾಹ ಕಂಡು ನಾನು ಬೆರಗಾಗುತ್ತಿದ್ದರೆ, ವೈದೇಹಿ ತಾನು ಕಷ್ಟಪಟ್ಟು ಒಲೈಸಿ, ರಮಿಸಿ ಹೊರಡಿಸಿದ ಶಾರದಾಂಬೆಯ ಭಕ್ತೆ ಈಕೆಯೋ? ಎಂದು ತಮ್ಮ ಆಶ್ಚರ್ಯವನ್ನು ನನ್ನ ಜತೆಗೆ ಹೇಳಿಕೊಂಡರು. ನಮ್ಮ ಜತೆಗೆ ಪಯಣಿಸಿದ್ದು ಸತ್ತ ಗಿರಿಬಾಲೆಯಲ್ಲ; ಜೀವಂತ ಜೀವನೋತ್ಸಾಹವನ್ನು ಕಾಯ್ದುಕೊಂಡ ಲೇಖಕಿ ಗಿರಿಬಾಲೆಯಾಗಿದ್ದರು.

**✍ ಚಂದ್ರಕಲಾ ನಂದಾವರ**

ಅವರ ಬಾಲ್ಯದ ಬಡತನದ ಬವಣೆಯನ್ನು ಅವರ ಬಾಯಿಯಿಂದಲೇ ಕೇಳುತ್ತಾ ಎರಡನೆಯ ತರಗತಿಯ ಬಾಲಕಿ ಗೆರಟೆ ಹಿಡಿದು ಬೇಡಿ ಬದುಕುತ್ತಿದ್ದ ರೀತಿ, ಶಾಲೆಯ ಅಧ್ಯಾಪಕ ಅಧ್ಯಾಪಿಕೆಯರಿಂದ, ಓರಗೆಯ ಸಹಪಾಠಿಗಳಿಂದ "ನಟ್ಬೋಜಿ" ಎಂದೇ ಕರೆಯಿಸಿಕೊಳ್ಳುತ್ತಿದ್ದ ಚುರುಕಿನ ಹುಡುಗಿ ಓದಿನಲ್ಲಿ ತನ್ನ ಜಾಣತನ ಪ್ರದರ್ಶಿಸದೆ ಅಪಮಾನ ಪಟ್ಟುಕೊಳ್ಳುತ್ತಲೇ ಇದ್ದಾಗ ಬಾಲೆ ಸರಸ್ವತಿ ದೇವರಲ್ಲಿ ಮೊರೆಯಿಡುತ್ತಿದ್ದುದು ಹೀಗಿರುತ್ತಿತ್ತಂತೆ. "ದೇವರೇ ನನಗೆ ಒಬ್ಬ ಶ್ರೀಮಂತ ಕಲೆಕ್ಟರ್ ಗಂಡನನ್ನು ಕೊಡು, ಅವರು ಈ ಟೀಚರನ್ನು ಜೈಲಿಗೆ ಹಾಕುವ ಹಾಗೆ ಮಾಡು" ಎಂದು ದೇವರು ನಿಜವಾಗಲೂ ಆ ಬಾಲೆಯ ಮೊರೆ ಕೇಳಿದುದು ಪವಾಡವೇ ಎಂಬಂತೆ ಆಯಿತು. 51 ವರ್ಷದ ರಾಮ ಶಾಸ್ತ್ರಿ ರಾಜವಾಡೆಯವರನ್ನು ಮದುವೆಯಾದುದು ಸೋಜಿಗವೇ. ಉಡುಪಿಯಲ್ಲಿ ಬೇಡಿ ತಂದು ತಾಯಿಗೆ ನೀಡುತ್ತಿದ್ದ 15ರ ಬಾಲೆ ಕಲೆಕ್ಟರರ ಹೆಂಡತಿಯಾಗಿ ಸಿಂಗಾಪುರಕ್ಕೆ ತೆರಳಿದುದು ಅಶ್ಚರ್ಯವಾದರೂ ಸತ್ಯ. ಇದು ಗಿರಿಬಾಲೆಯ ಜೀವನದಲ್ಲಿ ನಡೆದ ಪವಾಡವೇ ಸರಿ!

ಅವರಿಗೆ ಮಕ್ಕಳಿಲ್ಲ ಎಂದು ಗೊತ್ತಿದ್ದರೂ ವೈದೇಹಿಯವರು ತುಂಬ ಪ್ರಶ್ನೆ ಹಾಕಿ "ಅಲ್ಲ ನೀವು ದೇವರನ್ನು, ಮಕ್ಕಳು ಕೊಡು ಎಂದು ಬೇಡಿರಲಿಲ್ಲವೇ?" ಎಂದು ಕೇಳಿದರು. ಅದಕ್ಕೆ ಒಂದಿಷ್ಟೂ ಕೋಪಿಸಿದ ಬಾಲೆಯವರು "ಅಯ್ಯೋ!

ನಾನಾಗ ಚಿಕ್ಕವಳಲ್ಲವೇ? ನನಗಾಗುತ್ತಿದ್ದ ಅಪಮಾನದ ಮುಂದೆ ನನ್ನ ಟೀಚರಿಗೆ ಶಿಕ್ಷೆ ಕೊಡಿಸಲು ಕಲೆಕ್ಟರ್ ಗಂಡನನ್ನು ಕೇಳಿದ್ದೇನೆಯೇ ವಿನಾ ಕುಟುಂಬ ಸಂಸಾರದ ಕನಸೇ ನನಗಿರಲಿಲ್ಲ. ಹೌದು. ನಾನು ಕೇಳಲಿಲ್ಲ .ದೇವರು ಕೊಡಲಿಲ್ಲ'' ಎಂದು ವೇದಾಂತಿಯಂತೆ ಉತ್ತರವಿತ್ತು ಮೌನಿಯಾದರು. ದಾರಿ ಸಾಗುತ್ತಿತ್ತು. ನಮ್ಮ ಮಾತೂ ಮುಂದುವರಿಯುತ್ತಿತ್ತು. ಶ್ರೀಮತಿ ಪದ್ಮಾ ಶೆಣೈಯವರು ಮಾತಿಲ್ಲದೆ ಮೌನವಾಗಿ ಆಲಿಸುತ್ತಿದ್ದರು. ಈಗ ನನಗೂ ಧೈರ್ಯ ಬಂದು ಪ್ರಶ್ನೆ ಕೇಳಲು ನಾನೂ ಹಾತೊರೆಯುತ್ತಿದ್ದೆ.'' ನಿಜಕ್ಕೂ ಮಕ್ಕಳಾಗಲಿಲ್ಲವೆ?'' ಎಂದು ಕೇಳಿದರೆ ''ಬಸುರಾಗಿದ್ದೆ, ಆದರೆ ಮಗು ಉಳಿಯಲಿಲ್ಲ'' ಎನ್ನುವುದರ ಜತೆಗೆ ''ನಾನು ಕೇಳದೆ ದೇವರು ಯಾಕೆ ಕೊಡುತ್ತಾನೆ'' ಎನ್ನುತ್ತಾ ದೇವರಿಗೂ ತನಗೂ ನೇರವಾದ ಮಾತುಕತೆ ಇದೆ ಎಂಬಂತೆ ಭ್ರಮಾಧೀನ ಸ್ವರದಲ್ಲಿ ಉತ್ತರವಿತ್ತರು.

''ಅಲ್ಲ, ನೀವು ಹದಿನೈದರ ಸಣ್ಣ ಹುಡುಗಿ. ನಿಮ್ಮ ಗಂಡನೋ 51 ವರ್ಷದವರು ನಿಮಗೆ ಏನೂ ಅನ್ನಿಸಲಿಲ್ಲವೇ?'' ಎಂದರೆ ''ಹೌದು! ನಾನು ಕೇಳಿದೆ. ನೀವು ನನ್ನನ್ನು ಮದುವೆಯಾಗುವ ಬದಲು ಮಗಳಾಗಿ ದತ್ತು ತೆಗೆದುಕೊಳ್ಳಬಹುದಿತ್ತಲ್ಲ ಎಂದು. ಅವರು ಆಗ ಅದಕ್ಕೆ ಉತ್ತರ ನೀಡದೆ ಮೌನವಾದರು. ಮುಂದೆ ಬೆಂಗಳೂರಿಗೆ ಬಂದ ಬಳಿಕ ನನ್ನ ತುಂಬು ಯೌವ್ವನದ ದಿನಗಳಲ್ಲಿ ಅವರಿಗೆ ತನ್ನ ತಪ್ಪಿನ ಅರಿವು ಆಗಿತ್ತು. ನನ್ನನ್ನು ಮರುಮದುವೆಗೆ ಒಪ್ಪಿದರೆ ತಾನೇ ನಿಂತು ಮದುವೆ ಮಾಡಿಸುತ್ತೇನೆ ಎಂದೂ ಹೇಳಿದ್ದರು, ನಾನು ಒಪ್ಪಲಿಲ್ಲ'' ಎಂದು ತಿಳಿಸುತ್ತಾ, ಸಿಂಗಾಪುರದ ತನ್ನ ಬಂಗ್ಲೆಯಲ್ಲಿ ತನ್ನ ಮನೆಯೊಳಗೇ ಕೂಡುಹಾಕಿ ಹೋಗುತ್ತಿದ್ದ ದಿನಗಳನ್ನು ಕುರಿತು ಹೇಳಿದರು. ಆದರೂ ತನ್ನ ಸಾಹಿತ್ಯದ ಓದಿಗೆ ಬೇಕಷ್ಟು ಪುಸ್ತಕ ತಂದು ಕೊಡುತ್ತಿದ್ದುದಲ್ಲದೆ ಇಂಗ್ಲೀಷ್ ಸಹಿತ ಮರಾಠಿ, ತಮಿಳು ಇತ್ಯಾದಿ ಭಾಷೆಗಳನ್ನು ಕಲಿಸುವ ಯತ್ನ ಮಾಡಿದರು. ತನ್ನ ಓದಿನ ಆಸಕ್ತಿ ನೋಡಿ ಸಾಹಿತ್ಯದ್ ಪುಸ್ತಕಗಳನ್ನು ಖರೀದಿಸಿ ತಂದುಕೊಡುತ್ತಿದ್ದರು. ಮುಂದೆ ತಾನು ಬರವಣಿಗೆ ಪ್ರಾರಂಭಿಸಿದಾಗ ಅದನ್ನು ಪ್ರಕಟಣೆಗೆ ಕಳುಹಿಸಿಕೊಡುವಂತೆ, ಪ್ರಕಟವಾದಾಗ ಅದನ್ನು ಕತ್ತರಿಸಿ ಜೋಪಾನವಾಗಿ ತೆಗೆದಿಡಲು ನೀಡಿದ ಪ್ರೇರಣೆ ಇವೆಲ್ಲವನ್ನೂ ಗಿರಿಬಾಲೆ ನೆನಪಿಸಿಕೊಂಡರು.

ಮಾತುಕತೆ ಅವರ ಬದುಕಿನಿಂದ ಬರಹಕ್ಕೆ ಬಂದಾಗ ತನ್ನ ಪ್ರಗತಿ ಪರ ಸ್ತ್ರೀ ಸಂವೇದನೆಗಳನ್ನು ಇನ್ನೂ ಬಚ್ಚಿಟ್ಟುಕೊಂಡುದನ್ನು ಹೊರ ಹಾಕಿದರು. ಈ ದಿನಗಳಲ್ಲಿ ಅವರು ಮಾತಾಡುವ ಶಾರದಾ ದೇವಿಯೇ ಆಗಿ ಬೇಡಿ ಬಂದ ಭಕ್ತ ಭಕ್ತೆಯರಿಗೆ ಅಭಯವಾಣಿ ನೀಡುವುದು ಮಾತ್ರವಲ್ಲದೆ ವರದಹಸ್ತೆಯೂ ಆಗಿ ಸಾಮಾಜಿಕ ಚಿಂತನೆಗಳಿಗೆ ಧರ್ಮದ ಆಲಂಬನವನ್ನು ಪಡೆದಿದ್ದರು ಅನ್ನಿಸುತ್ತಿತ್ತು. ಇದೇ ವೇಳೆ ಉಡುಪಿ ಮಠಗಳ, ಮಠಾಧಿಪತಿಗಳ ಕಡೆಗೆ ಮಾತು ಹೊರಳಿದಾಗ ಉಡುಪಿಯ ಅಷ್ಟಮಠದ ಕಿರಿಯ ಯತಿಗಳೊಬ್ಬರು ಮಠ ಬಿಟ್ಟು ಲೌಕಿಕ ಜೀವನಕ್ಕೆ ತೆರಳುವ ಸಂದರ್ಭ ಬಂದುದನ್ನು ಮತ್ತು ಆ ಕಿರಿಯ ಯತಿಗಳ ಜತೆಗೆ ವಿಶ್ವಾಸವಿದ್ದ ಗಿರಿಬಾಲೆಯೊಂದಿಗೆ ಅವರು ''ಎಲ್ಲಾ ಭಕ್ತರು ಬಂದು ನನ್ನ ಕಾಲಿಗೆರಗುವಾಗ ನನ್ನ ಮನಸ್ಸಿನ ಭಾವನೆಗಳಿಗೆ ಕಡಿವಾಣ ಹಾಕಲಾಗದೆ ನನ್ನ ಸ್ಥಿತಿ ನನಗೆ ಅಸಹ್ಯವಾಗುತ್ತಿದ್ದುದನ್ನೂ'' ಹೇಳಿದರು. ಗಿರಿಬಾಲೆಯವರು ಆ ಯತಿಗಳು ಪೀಠ ಬಿಟ್ಟು ಹೊರಬರುವಲ್ಲಿ ಆತ್ಮ ವಿಶ್ವಾಸ ತುಂಬಿದೆ, ಎಂದರು. ಪ್ರಾಮಾಣಿಕವಾದ ಬದುಕನ್ನು ಬದುಕಬೇಕೆಂಬ ತುಡಿತ, ಶ್ರೀಮಂತ ಬಡವರೆಂದು ಭೇದ ಮಾಡುವ ಸಮಾಜ, ಜಾತಿಗಳ ವರ್ಗೀಕರಣ, ಸ್ತ್ರೀಪುರುಷರ ಅಸಮಾನತೆ ಇವೆಲ್ಲವೂ ಲೇಖಕಿ ಗಿರಿಬಾಲೆಯವರನ್ನು ಕಾಡಿದ ವಿಷಯಗಳು. ಹಾಗೆಯೇ ಸ್ವಾತಂತ್ರ್ಯ ಹೋರಾಟದ ಆ ದಿನಗಳಲ್ಲಿ ಸಮಾಜದ ಸುಧಾರಣೇಯೂ ದೇಶಭಕ್ತಿ ಎಂಬ ಚಿಂತನೆಯೂ ಇವರಲ್ಲಿ ಗಾಢವಾಗಿತ್ತು.

1941ರಲ್ಲಿ ರಾಜವಾಡೆಯವರ ನಿಧನದಿಂದ ಉಡುಪಿಗೆ ಹಿಂತಿರುಗಿದ ಗಿರಿಬಾಲೆ ಸುಮಾರು 40, 48 ವರ್ಷಗಳ ವರ್ಷಗಳ ಬಳಿಕ ರಾಜಧಾನಿ ಬೆಂಗಳೂರಿನ ರಸ್ತೆಯಲ್ಲಿ ಸಾಗುವಾಗ ಹೊರಗೆ ಕಣ್ಣು ಹಾಯಿಸಿ ತಾನು ಹೋಗುತ್ತಿದ್ದ ಶಾಲೆ, ಕಾನ್ವೆಂಟನ್ನು ನೋಡಲು ಕಾತರಿಸುತ್ತಿದ್ದುದು ನಮಗೆ ಸಂತಸ ತಂದಿತ್ತು. ಸರಸ್ವತಿ ಬಾಯಿ ರಾಜವಾಡೆಯವರಿಗೆ ಸಹಜವಾಗಿಯೇ ತಾಯಿ ಭಾಷೆ ಮರಾಠಿ, ಹುಟ್ಟೂರಾದ ಉಡುಪಿಯ ಕನ್ನಡ, ತುಳುಗಳು ಸಹಜವಾಗಿ ಕಲಿತುಕೊಂಡವುಗಳು. ರಾಜವಾಡೆಯವರ ಪ್ರೋತ್ಸಾಹದಿಂದ ಕಲಿತುದು ಇಂಗ್ಲೀಷ್, ಸಂಸ್ಕೃತ ಮತ್ತು ಹಿಂದಿ. ಕೆಲಸದ ಆಳುಗಳಿಂದ ಕಲಿತದ್ದು ತಮಿಳು. ಹೀಗೆ ಬಹುಭಾಷಾ ವಿಶಾರದೆಯಾಗಿ, ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ, ರಾಷ್ಟ್ರಭಾಷಾ ವಿಶಾರದ ಪರೀಕ್ಷೆಯಲ್ಲಿ ಉತ್ತಮ ಅಂಕಗಳೊಂದಿಗೆ ತೇರ್ಗಡೆಯಾಗಿ ವಿದ್ಯಾ ಸಂಪನ್ನೆಯಾದರು. ಬಾಲ್ಯದಲ್ಲಿ ಕನಸನ್ನು ಕಾಣಲಾಗದ ಸರಸ್ವತಿ ನಿಜವಾದ ಅರ್ಥದಲ್ಲಿ ಸರಸ್ವತಿ ಹಾಗೂ ಲಕ್ಷ್ಮಿಯಾದರು. ಆದರೆ ಇವೆಲ್ಲವೂ ಇದ್ದರೂ ಅವರ ಮನದ ಭಾವನೆಗಳಿಗೆ ತನಗಾದ ಅನ್ಯಾಯ ಹೆಣ್ಣಿನ ಬದುಕಿನಲ್ಲಾಗಬಹುದಾದ ಅನ್ಯಾಯಗಳಾಗಿ ಕಂಡಾಗ ಅವರ ಬರವಣಿಗೆ ಪ್ರಾರಂಭವಾಯಿತು. ಅವರು ಕತೆಗಾರ್ತಿಯಾದರು. ಪತ್ರಿಕೆಗಳಿಗೆ ಅಂಕಣಗಳನ್ನು ಬರೆದು ಅಂಕಣಗಾರ್ತಿಯಾದರು. ನಾಟಕಗಳನ್ನು ಬರೆದು ನಾಟಕಗಾರ್ತಿ ಮಾತ್ರವಲ್ಲ ನಾಟಕ ತಂಡ ಕಟ್ಟಿ ತಾನೂ ನಟಿಸಿದರು. ಪತ್ರಿಕೆಯನ್ನು ನಡೆಸಿದರು. ಹಲವಾರು ಮಂದಿ ಕಿರಿಯ ಯುವತಿಯರಿಗೆ ಬರವಣಿಗೆಯ ಅವಕಾಶ ಅವರ 63 ಕಥೆಗಳು ''ಆಹುತಿ ಮತ್ತು ಇತ್ಯಾದಿ ಕಥೆಗಳು'', ''ಕದಂಬ'', ''ಪ್ರೇಮ ವಿವಾಹ'' ಕಥಾ ಸಂಕಲನಗಳಲ್ಲಿ ಪ್ರಕಟವಾಗಿವೆ. ಇವೆಲ್ಲವೂ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದ ವೇಳೆ ''ದಿ ಹಿಂದೂ'' ಪತ್ರಿಕೆಯಲ್ಲಿ ವಿಮರ್ಶಕರೊಬ್ಬರು ಗಿರಿಬಾಲೆಯವರನ್ನು ''ಸಣ್ಣ ಕಥೆಗಳ ಅನಭಿಷಿಕ್ತ, ರಾಣಿ'' ಎಂದು ಕರೆದಿದ್ದಾರೆ. ವೀಣಾಪಾಣಿ, ವಿಶಾಲ, ಗಿರಿಬಾಲೆ ಎಂಬ ಕಾವ್ಯನಾಮದಲ್ಲಿ ಬರೆಯುತ್ತಿದ್ದ ಗಿರಿಬಾಲೆಯವರ ಅಂಕಣಗಳ ಹೆಸರೇ ವಿಶಿಷ್ಟವಾದುದು ''ಅಕ್ಕನ ಓಲೆ,'' ''ಏನು ಅಡುಗೆ?'', ''ಬಾಲಿಕೆಯರ ಬೊಕ್ಕಸ''.

ಒಂದೇ ಒಂದಾದ ''ವಿಮಲ'' ಕಾದಂಬರಿ ಅನೇಕ ನಾಟಕಗಳು ''ಪರಿಣಯ'', ''ಮಂಥರೆ ಕಂಡ ಅಂತರಂಗ'', ''ಪ್ರಕಾಶ'', ''ಡಿಪ್ಟಿ ಕಲೆಕ್ಟರ್'', ''ನಲ್ಮೆಯ ಸಹೋದರ'' ಮತ್ತು ''ಸಂಸಾರ'' ಇವುಗಳೂ ಸುಮಾರು ಅರುವತ್ತಕ್ಕೂ ಮೀರಿದ ಲೇಖನಗಳೂ ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಕವನ ಸಂಕಲನವಾಗಿ ಬರದೆ ಇದ್ದರೂ ಅವರ ಕವನಗಳು ಪತ್ರಿಕೆಗಳಲ್ಲಿ ಪ್ರಕಟವಾಗಿವೆ.

ಮುಂದೆ ತನ್ನನ್ನು ಪೂರ್ಣವಾಗಿ ಶಾರದಾಂಬೆಗೆ ಸಮರ್ಪಿಸಿಕೊಂಡ ಬಳಿಕದ ರಚನೆ ಭಕ್ತಿ ಸಾಹಿತ್ಯ. ಅವು ''ಕೃಪಾತರಂಗ ಭಾಗ –1 ಮತ್ತು ಭಾಗ–2'', ''ಸ್ತವನಾಂಜಲಿ'', ''ಶ್ರೀ ಶಾರದಾಂಬ ಸ್ತುತಿ ಗೀತೆಗಳು'', ''ಶ್ರೀಶಾರದಾಂಬ ದೇವಿ ಭಕ್ತರಿಗೆ ಪ್ರಕಟಿಸಿದ ಮಹಿಮೆಗಳು'', ''ಶ್ರೀ ಶಾರದಾಂಬ ದೇವಸ್ಥಾನದ ಪೂರ್ವೇತಿಹಾಸ'' ಇತ್ಯಾದಿ.

''ಚೇತರಿಸಿ ಭಗಿನಿಯರೇ''
ಸಾಕಿನ್ನು ತೂಕಡಿಕೆ
ಶ್ರೀತದಾಸಿಯರಾಗಿ
ಬಾಳಿದುದು ಸಾಕಾಯ್ತು
ಒಡಹುಟ್ಟು ನಿಮ್ಮಗಳ
ಕಡುಪಾಡು ಪಡುತಿಹುದ
ಜಡಮತಿಯ ತೊರೆ ತೊರೆದು
ಒಂದಿನಿತು ಯೋಚಿಸಿರಿ.

ಹೀಗೆ ಸಾಗುವ ''ಕೆಲೆಯೋಣ'' ಶೀರ್ಷಿಕೆಯ ಕವನದ ಕೊನೆಯಲ್ಲಿ

ನಾವೆಲ್ಲ ಒಂದಾಗಿ
ಕರುನಾಡ ಸಿರಿಗಾಗಿ
ಸಾವಿಲ್ಲ ಇನ್ನೆಮಗೆ
ಎಂದೆಂಬ ಭಾವದಲಿ
ಒಗ್ಗೂಡಿ ಮುಂದಾಗಿ
ಇನ್ನಾದರೂ ದುಡಿದು
ಹಿಗ್ಗಿ ಹಿರಿದಾಗಿ ಮಿಗೆ
ನಲಿಯೋಣ ಕೆಲೆಯೋಣ!

ಇನ್ನೊಂದು ಕವಿತೆ – ''ಹೆಣ್ಣು ಹಿರಿಮೆ''

ಹೆಣ್ಣು ಹೆಣ್ಣು ಹೆಣ್ಣು ಎಂಬ
ಸಣ್ಣ ಮಾತು ಬರಿದೆ ಏಕೆ?
ಹೆಣ್ಣಿನಿಂದೆ ಜಗದ ಇರವು
ಹೆಣ್ಣ ಹಳಿಯೆ ತರಲು ಇರದು

ಎಂದು ಸಾಗುತ್ತಾ ಹೆಣ್ಣನ್ನು ಹಳಿಯುವ, ಹೆಣ್ಣಿಗೆ ಗೌರವ ಸ್ಥಾನಮಾನ ನೀಡದಿರುವ ಪುರುಷರಿಗೆ ಎಚ್ಚರಿಕೆಯ ಮಾತನ್ನು ಈ ರೀತಿ ಹೇಳುತ್ತಾ ಕವಿತೆ ಮುಗಿಯುತ್ತದೆ.

ನಿನ್ನ ಆದಿ ಅಂತ್ಯವೆಲ್ಲ
ಹೆಣ್ಣು ಇಲ್ಲದಿಲ್ಲ ನೋಡು
ಹೆಣ್ಣು ಮನವು ನೋಯೆ ನಿಜಕು
ಪ್ರಳಯ ಸಿದ್ಧ; ಸಟೆಯದಲ್ಲ
ಹೆಣ್ಣು ಒಲುಮೆ ಬಲುಮೆಗಾಗಿ
ಹೆಣ್ಣು ಬಾಳ ಸುಗಮಕಾಗಿ
ನಿನ್ನ ನೀನು ಮೀಸಲಿರಿಸು
ಇರಲಿ ಎಚ್ಚರ!

ಹೀಗೆ ಹೆಣ್ಣಿನ ಬದುಕಿನ ವಿವಿಧ ಬಗೆಯ ನೋವುಗಳಿಗೆ ತಾನೇ ಸಾಕ್ಷಿಯಾದ ಸರಸ್ವತಿ ಬಾಯಿ ರಾಜವಾಡೆ ನವೋದಯ ಕಾಲದ ಸುಧಾರಣವಾದೀ ಚಿಂತನೆಗಳೊಂದಿಗೆ ಪ್ರಗತಿಶೀಲದ ಬಂಡಾಯದ ಪ್ರವೃತ್ತಿಯನ್ನು ತನ್ನ ಬರಹಗಳಲ್ಲಿ ತೋರ್ಪಡಿಸಿದ ಲೇಖಕಿ. ಅವರ ಕೊನೆಯ ದಿನದ ಬರಹಗಳನ್ನು ಸಾಹಿತ್ಯಲೋಕ ಸ್ವೀಕರಿಸದೆ ಹೋದರೂ ಸರಸ್ವತಿ ಬಾಯಿ ರಾಜವಾಡೆಯ ಬದುಕು ಒಂದು ದಂತಕತೆಯಾಗಬಲ್ಲ, ಐತಿಹ್ಯವಾಗಬಲ್ಲ ವಿಶಿಷ್ಠ ಬದುಕು. ಇಂದಿನ ಸ್ತ್ರೀವಾದಿ ನಿಲುವಿಗೆ ಅವರ ಎಲ್ಲ ಕತೆಗಳು, ಲೇಖನಗಳು ಸಮರ್ಥ ಸಾಕ್ಷಿಯಾಗಿ ಉಳಿಯುತ್ತವೆ ಎನ್ನುವುದರಲ್ಲಿ ಎರಡು ಮಾತಿಲ್ಲ. ■


## MATRIMONIAL

Alliance invited for a Girl, DOB- 30.06.1987 Height – 5ft 3", Kashyap Gotra, Qualification –B.M.S. & MBA in H.R. Age preference- 27 to 30 yrs, Kannada Speaking Madwa Boys from Bangalore /Mysore settled in Mumbai Preferred. Good Job with Salary more than Rs. 50,000/- p.m. preferred.

Contact : Mr. Amar G. Malur – 9821677543 / 0251-2499869

*********

Alliance invited for Smarta Brahmin Boy aged 30 yrs., Height 5ft 7", Gotra – Mudgalysa, Qualification –MBA, Mass Media, working with MNC in Mumbai

Contact: B.N.L.Murthy - 9892737118


# ವಿಧವಾ ವಿವಾಹ ಪ್ರವರ್ತಕ

*(ಪುಟ 4 ರಿಂದ)*

ಸಾಂಸ್ಕೃತಿಕ, ಸಾಮಾಜಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಜನಪ್ರಿಯರಾದರು. ಇವರ ಜನಪ್ರಿಯತೆ ಹಾಗೂ ವಿಧವಾ ವಿವಾಹಕ್ಕೆ ತೋರಿಸುತ್ತಿರುವ ಉತ್ಸಾಹ ಮತ್ತು ಧೈರ್ಯ ಸಹಿಸಲಾಗದೆ ಅಲಂಪೂರಿನ ಬ್ರಾಹ್ಮಣ ಸಮುದಾಯ ಶರ್ಮರ ಮೇಲೆ ಬಹಿಷ್ಕಾರ ಹಾಕಿತು. ಇದರಿಂದ ಧರ್ಮ ಮತ್ತು ಅವರ ಪರಿವಾರದವರು 6/7 ತಿಂಗಳು ಕಷ್ಟ ಪಡಬೇಕಾಯಿತು. ಆದರೂ ಶರ್ಮರು ವಿಚಲಿತರಾಗಲಿಲ್ಲ. ಅಲ್ಲಿನ ಪ್ರಮುಖ 14 ಬ್ರಾಹ್ಮಣರ ಮೇಲೆ ಮಾನನಷ್ಟ ದಾವೆ ಹಾಕಿದರು. ಅವರಲ್ಲಿ ಇಬ್ಬರು ನ್ಯಾಯವಾದಿಗಳು. ವಿಚಾರಣೆ ಬರುವ ಹಂತದಲ್ಲಿ ಈ 14 ಜನ ಬ್ರಾಹ್ಮಣರಿಗೆ ಹೆದರಿಕೆ ಶುರುವಾಯಿತು. ಏಕೆಂದರೆ Hindu Remarriage Act ಪ್ರಕಾರ ಒಂದು ವೇಳೆ ದಂಡನೆಯಾದರೆ 1 ವರ್ಷ ಪರಿಶ್ರಮ ಜೈಲುವಾಸ ಹಾಗೂ ದಂಡಕೊಡಬೇಕಾಗಿತ್ತು. ಕಾಯಿದೆ ಪ್ರಕಾರ ಶರ್ಮರ ಮದುವೆ ಸಿಂಧುವಾಗಿತ್ತು. ಈ ಗಂಡಾಂತರದಿಂದ ಪಾರಾಗಲು ಈ 14 ಜನರಿಗೆ ಮರ್ಯಾದೆಯುತ ಮುಕ್ತದಾರಿಬೇಕಾಯಿತು. ಅವರು ಬ್ರಾಹ್ಮಣರಾಗಿದ್ದ Deputy Collector ಗೆ ಶರಣು ಹೋದರು. Deputy Collector ಶರ್ಮರಿಗೆ ಸಂಧಾನಕ್ಕೆ ಹೇಳಿಕಳುಹಿಸಿದರು. ಸುದೀರ್ಘ ಚರ್ಚೆಯಾದ ನಂತರ ಶರ್ಮರು ಒಂದು ಉಪಾಯವನ್ನು ಸೂಚಿಸಿದರು. ಹಾಕಿದ ಬಹಿಷ್ಕಾರ ಹಿಂತೆಗೆದುಕೊಂಡು ಉಭಯ ಪಕ್ಷದವರು ಸೌಹಾರ್ದವಾಗಿ ದೇವಸ್ಥಾನದಲ್ಲಿ ಸಹಭೋಜನಮಾಡಲಿ ಎಂದು! ಇದು ಎಲ್ಲರಿಗೂ ಒಪ್ಪಿಗೆಯಾಗಿ ಸಹಭೋಜನ ಕೂಟ ನಡೆಯಿತು. ನಂತರ ಶರ್ಮರು ಕೋರ್ಟಿನಲ್ಲಿ ಹಾಕಿದ್ದ ಮಾನನಷ್ಟ ಮೊಕದ್ದಮೆಯನ್ನು ವಾಪಸ್ಸು ತೆಗೆದುಕೊಂಡು ಶಾಂತ ವಾತಾವರಣಕ್ಕೆ ಅನುವು ಮಾಡಿಕೊಟ್ಟರು.

ನವವಧು ಕಮಲಾ ಶರ್ಮರ ಜೊತೆ ಸುಮಾರು 60 ವರ್ಷ ಸಂಸಾರ ನಡೆಸಿ, ಈಚೆಗೆ 2001 ರಲ್ಲಿ ಕಾಲವಾದರು. ಅವರದು ವಸಿಷ್ಠ ಅರುಂಧತಿಯರಂತೆ ಅನ್ಯೋನ್ಯವಾದ ದಾಂಪತ್ಯ ಜೀವನ. ಅವರ ಮಧುರ ದಾಂಪತ್ಯದ ಬಗ್ಗೆ ಬೆಳಗೆರೆ ಕೃಷ್ಣಶಾಸ್ತ್ರಿಗಳು ಬಹಳ ರಂಜನೀಯವಾಗಿ ವರ್ಣಿಸುತ್ತಾರೆ. ವಿಧವಾ ವಿವಾಹ ಶಾಸ್ತ್ರ ಸಮ್ಮತವಾಗಿತ್ತು ಎಂದು ಹೇಳಲು ಶರ್ಮರ ದೀರ್ಘ ವೈವಾಹಿಕ ಜೀವನ ಹಾಗೂ ವಿಪುಲ ಸಂತಾನ ಸಾಕ್ಷಿಯಾಗಿವೆ.

ಶರ್ಮರಿಗಿಂತ ಬಹಳ ಮೊದಲೇ ಅಂದರೆ 19ನೇ ಶತಮಾನದಲ್ಲಿ ಬಂಗಾಳದಲ್ಲಿ ಈಶ್ವರಚಂದ್ರ ವಿದ್ಯಾಸಾಗರ, ರಾಜರಾಮಮೋಹನರಾಯ್ 20 ನೇ ಶತಮಾನದಲ್ಲಿ ಆದಿಯಲ್ಲಿ ಮಹಾರಾಷ್ಟ್ರದಲ್ಲಿ ಮಹರ್ಷಿಕರ್ವೆ, ಆಂಧ್ರದಲ್ಲಿ ವೀರೇಶಲಿಂಗ ಪಂತಲು ಮುಂತಾದ ಮಹನೀಯರು ವಿಧವಾ ವಿವಾಹ ಆಂದೋಲನವನ್ನು ಮಾಡಿದ್ದರು. ಅವರೆಲ್ಲರಿಗೂ ಅವರದೇ ಸ್ವಯಂ ಪ್ರತಿಭೆ, ಸಮಾಜದಲ್ಲಿ ಪ್ರತಿಷ್ಠಿತ ಸ್ಥಾನ ಹಾಗೂ ಬ್ರಿಟಿಷ್ ಸರ್ಕಾರದ ಪೂರ್ಣ ಸಹಕಾರವಿತ್ತು. ಆಡರೆ ನಿಜಾಂ ಪ್ರಾಂತ್ಯದ ಅತೀ ಹಿಂದುಳಿದ ಪ್ರದೇಶದಲ್ಲಿ ಅನಕ್ಷರಸ್ಥ ಹಾಗೂ ಪಟ್ಟಭದ್ರ ಸಮಾಜದಲ್ಲಿ ಸರ್ಕಾರದ ಯಕಃಶ್ಚಿತ್ ಬೆಂಬಲವಿಲ್ಲದೆ, 63 ವರ್ಷದ ಹಿಂದೆ ವಿಧವಾ ವಿವಾಹದಂತಹ ಸಾಮಾಜಿಕ ಸುಧಾರಣೆಯನ್ನು ಮಾಡಬೇಕಾದರೆ ಎಷ್ಟು ಕಷ್ಟನಷ್ಟಗಳನ್ನು ಶರ್ಮರು ಅನುಭವಿಸಿರಬಹುದು ಎಂದು ಊಹಿಸಲೂ ಸಾಧ್ಯವಿಲ್ಲ.

ಗುರುಕುಲದಲ್ಲಿ ವಿದ್ಯಾಭ್ಯಾಸಮಾಡಿ ವಿಧವಾ ವಿವಾಹ ಶಾಸ್ತ್ರ ಸಮ್ಮತವೆಂದು ಮನವರಿಕೆ ಆದ ಮೇಲೆ ಅದನ್ನು ತಮ್ಮ ನಿಜ ಜೀವನದಲ್ಲಿ ಅನುಷ್ಠಾನಕ್ಕೆ ತಂದು, ಇತರ ವಿಧವಾ ಕನ್ಯೆಯರ ವಿವಾಹಗಳನ್ನು ಮಾಡಿಸಿದ್ದು ಒಂದು ಉದಾತ್ತವಾದ ಯಜ್ಞವೇ ಸರಿ. ನಿಜವಾಗಿಯೂ ಶರ್ಮರು ಪುಣ್ಯಕೀರ್ತಿಗಳು. ■

# ವಿ. ಸೀ. ಅವರ "ಬಿಟ್ಟುಕೊಡಿ"

ಕನ್ನಡ ನವೋದಯ ಕಾವ್ಯದಲ್ಲಿ ಹೆಣ್ಣಿನ ದನಿ ಕೇಳಿಬರುವುದಿಲ್ಲ. ಅಪರೂಪಕ್ಕೆ ಕೇಳಿಸಿದರೂ ಅದು ತುಂಬ ಕ್ಷೀಣ ಎಂಬುದು ವಿಮರ್ಶಕರ ಒಂದು ಸಾಮಾನ್ಯ ಅವಲೋಕನ. ಈ ಅವಲೋಕನವನ್ನು ಸ್ಥೂಲವಾಗಿ ಒಪ್ಪಬಹುದಾದರೂ ಅಪವಾದಗಳನ್ನು ಆಲಕ್ಷಿಸುವಂತಿಲ್ಲ. ಬೇಂದ್ರೆ ಅವರ "ಸಖೀಗೀತ" ಬಹುಭಾಗ 'ಸಖ'ನ ಮಾತುಗಳಿಂದಲೇ ತುಂಬಿ ಹೋಗಿದ್ದರೂ ಅಪರೂಪಕ್ಕೊಮ್ಮೆ ಕೇಳಿಸುವ 'ಸಖಿ'ಯ ಮಾತಿನ ಪ್ರಖರತೆ ಅವನನ್ನು ಚುಚ್ಚದೆ ಇಲ್ಲ. ತನ್ನ ಸಖನ ಸಾಹಸಗಳಿಗೆ ಸಖಿಯು ಪ್ರತಿಕ್ರಿಯಿಸುವ ರೀತಿಯಲ್ಲೇ ತನ್ನ ಸ್ಥಿತಿಯ ತೀವ್ರವಾದ ಮಂಡನೆಯೂ ಇದೆ. ತನ್ನ ಸಖನ ಜೀವನಶೈಲಿ ಮತ್ತು ಧೋರಣೆಗಳನ್ನು ಕುರಿತ ಹರಿತವಾದ ಟೀಕೆಯೂ ಇದೆ. "ನಿಮ್ಮ ಜೀವನ ಧ್ಯೇಯ ಗೌರಿಶಂಕರದಂತೆ / ಶಿಖರವೆತ್ತಿದೆ ಮುಗಿಲಿನೆದೆ / ಜನರೀತಿಯಂತಯೆ ನೆಲದ ಕಡೆ ಎಂದು ಸಖಿ ನುಡಿಯುವಾಗ ತನ್ನ ಸಖನ ಗುರಿಯನ್ನಾಗಲೀ ನಡೆಯನ್ನಾಗಲೀ ಸಖಿ ಅಗೌರವದಿಂದೇನೂ ನೋಡುವುದಿಲ್ಲ. ಆದರೆ ತನ್ನದೂ ಒಂದು ಜೀವನಕ್ರಮವಿದೆ ಎಂದು ಅವಳು ಮೆಲುದನಿಯಲ್ಲೇ ವಾದಿಸುತ್ತಿರುವುದೂ ನಿಜ. ಅವನ ಲೋಕಾಭಿರಾಮದ ಸಮಾಧಾನ ಅವಳನ್ನು ತಣಿಸದು. 'ಯಾವುದೋ ಜನುಮದ ಕಥೆ'ಯನ್ನು ಸುಮ್ಮನೇ ಕೇಳಲಿಕ್ಕೆ ಅವಳು ಸಿದ್ಧಳಿಲ್ಲ. "ನಿಮ್ಮೆದೆ ಎತ್ತರಕ್ಕೆ ನಾವೇನು ಬಂದೇವು?" ಬಂದೇವು ಎನ್ನುವಾಗ ತಾನು ಕೊಂಚ ಹಿಂದಕ್ಕೆ ಸರಿದು ಅವನ ಸಾಹಸವನ್ನೇ ಮುಂದು ಮಾಡಿದಂತೆ ಭಾಸವಾದರೂ ಮುಂದಿನ ಸಾಲಿನಲ್ಲಿ 'ಕಲಿತವರ ಬೆಡಗಿಲ್ಲ ನಮ್ಮ ಕಡೆ" ಎಂದು ವ್ಯಂಗ್ಯದಲ್ಲಿ ಕುಟುಕುವ ಮೂಲಕ ಸಖಿ ತನ್ನ ಟೀಕೆಯನ್ನು ಇನ್ನಷ್ಟು ಚೂಪಾಗಿ ಮಂಡಿಸುತ್ತಾಳೆ. ತನ್ನ ಮಾತಿಗೊಂದು ಲಯ, ತರ್ಕ ಸಿಕ್ಕಿದೊಡನೆ ಅವಳು ಮುಂದಿನ ಸ್ಟಾಂಜಾಗಳಲ್ಲಿ ತನ್ನ ಅಭಿಪ್ರಾಯಗಳನ್ನು ಸ್ಪಷ್ಟ ಮಾತುಗಳಲ್ಲಿ ದಾಖಲಿಸುತ್ತಾಳೆ.

ನಿಮ್ಮ ಮಾತೇ ಬೇರೆ ಮನ ಬೇರೆ,
ಜನ ಬೇರೆ ರಸ ರುಚಿ ಬೇರೆ,
ಜೀವನ ಬೇರೆಯೆ ನಿಮಗೆಷ್ಟು ಸಹವಾಸ ವನವಾಸದಂತೆಯೆ
ನಮ್ಮ ಹುಚ್ಚರ ಮಾತು ಹುಡುಗಾಟಿಗೆ ಗೆಳೆಯರ ಕೂಡಾಡಿ ಬಂದಾಗ,
ನಾ ನಿಮ್ಮ ಮುಖದಲುಕ್ಕುವ ಗೆಲುವ ಕಂಡಿಲ್ಲವೆ!
ಮನೆ ಬೆಳಕು ಮುಂದಿರೆ ಆ ಕಣ್ಣುಕುಂದಿರೆ
ನಾನೊಳಗೆ ನೊಂದಿರೆ ನೀವರಿಯಿರೆ
ಏಕೆಂದು ಸಾಕೆಂದು ಬೇಕೆಂದು ನೂಕೆಂದು
ರಮಿಸಲಾಡಿದಿರಲ್ಲ ನಿಮ್ಮಷ್ಟಕ್ಕೆ
ಗಂಗೆಯ ಕಷ್ಟವು ಗೌರಿಗೆ ತಿಳಿಯದು
ಹೆಂಗಸಿನ ಕಷ್ಟವು ಗಂಡಸಿಗೆ
ಎಂದಿಗು ತಿಳಿಯದು! ಏತಕೆ ತಿಳಿಯೋದು?
ದುಃಖವು ನಮ್ಮದು ನಮಗೆ ಇದೆ

ಸುಕುಮಾರ ಕವಿ, ಪುಷ್ಪಕವಿ ಎಂದೆಲ್ಲ ಕರೆಸಿಕೊಂಡಿರುವ ನರಸಿಂಹಸ್ವಾಮಿಯವರ ಕಾವ್ಯದಲ್ಲೂ ಇಂಥ ನಿದರ್ಶನಗಳು ಇಲ್ಲದಿಲ್ಲ. "ನಿಮ್ಮ ಸಂಸಾರ ಇದು" ಎಂಬ ಕವಿತೆಯಲ್ಲಿ "ಬೆಳಗಾದರೆ ಸಂಜೆಯಾದರೆ ಮಾತೆತ್ತಿದರೆ ಸುಮ್ಮನಿದ್ದರೆ– /ನಿನ್ನ ಮನೆ ನಿನ್ನ ಮಗು ನಿನ್ನ ಸಂಸಾರ ಇದು /ನಿನ್ನ ನಿನ್ನದು ನಿನಗೆ ನೀನೆಲ್ಲ ಎನ್ನುವಿರೆ,–/ ನಿರ್ಗುಣ ಬ್ರಹ್ಮವೇ ನೀವು?' ಎಂದು ಒಮ್ಮೆ ತಿರುಗಿಬೀಳುವ ಪತ್ನಿ ತನ್ನ ಪತಿಯನ್ನು ಕುರಿತು 'ಅಧಿಕಾರ ಮಾತ್ರ ನಿಮ್ಮದೆ? ದುಡಿಮೆ ನನ್ನದು?' ಎಂದು ದಿಟ್ಟವಾಗಿ ಪ್ರಶ್ನಿಸುತ್ತಾಳೆ. "ಮಂಗಳವೆ ಮನೆಗೆ ಈ ಪಾಡು" ಎಂಬ ಕವಿತೆಯಲ್ಲಿ ಈ ಟೀಕೆಗೆ ಒಂದು ಸೈದ್ಧಾಂತಿಕ ಖಚಿಕತೆ ಬಂದುಬಿಡುತ್ತದೆ.

ಕೈಹಿಡಿದ ಮಡದಿ ಮನೆಯನು
ಗುಡಿಸಿ, ಸಿಂಗರಿಸಿ
ಅಡುಗೆಯನು ಅಟ್ಟು, ಬಡಿಸುವುದವಳ ಕರ್ಮ
ಕರುಣಾಳು ಗಂಡ ದಾರಿಯ ಹಿಡಿದು ತನ್ನ ಮನ
ಬಂದಂತೆ ಅಲೆಯುವುದು ಅವನ ಧರ್ಮ
ಯಾರು ಬರೆದರು ಧರ್ಮ
ಕರ್ಮಗಳ ಶಾಸ್ತ್ರವನು?
ಕಟ್ಟುಕಥೆ ಇನ್ನು ಸಾಕು

ದಾಂಪತ್ಯದ ಒಳಗೆ, ಕೌಟುಂಬಿಕ ವ್ಯವಸ್ಥೆಯ ಒಳಗೇ ಇರುವ ಇಕ್ಕಟ್ಟು-ಬಿಕ್ಕಟ್ಟುಗಳನ್ನು, ಅಸಮಾನತೆಯ ನೆಲೆಗಳನ್ನು ಇವರೆಲ್ಲ ದಿಟ್ಟವಾಗಿ, ನೇರವಾಗಿ ಪ್ರಶ್ನಿಸುವವರಾದರೂ ಆ ಚೌಕಟ್ಟನ್ನೇ ಮುರಿಯುವ, ಉಲ್ಲಂಘಿಸುವ ಮಾತುಗಳನ್ನು ಆಡುವುದಿಲ್ಲವೆಂಬುದನ್ನೂ ಗಮನಿಸಬೇಕು. ಒಟ್ಟಿನಲ್ಲಿ ತಮ್ಮ ಸಂಸಾರ ಚೆನ್ನಾಗಿರಬೇಕು. ಗಟ್ಟಿಯಾಗಿರಬೇಕು, ಅಲ್ಲಿ ಹೊಂದಾಣಿಕೆ ಇರಬೇಕು, ಪರಸ್ಪರ ಆದರ–ಗೌರವಗಳಿರಬೇಕು ಎಂಬ ಹಂಬಲ ಈ ಟೀಕೆ ಟಿಪ್ಪಣಿಗಳಲ್ಲಿ

**ಟಿ. ಪಿ. ಅಶೋಕ**

ಅಂತರ್ಗತವಾಗಿರುವಂತೆ ತೋರುತ್ತದೆ.

ಈ ಹಿನ್ನೆಲೆಯಲ್ಲಿ ವಿ.ಸೀ.(1899–1983) ಅವರ "ಬಿಟ್ಟುಕೊಡಿ" ಎಂಬ ಕವಿತೆ ತನ್ನ ಸ್ಫೋಟಕ ಗುಣದಿಂದ ನಮ್ಮನ್ನು ಬೆಚ್ಚಿಬೀಳಿಸುವಂತಿದೆ. ಈ ಕವಿತೆ ರಚಿತವಾದದ್ದು ಐವತ್ತರ ದಶಕದಲ್ಲಿ. ಇದನ್ನು ಬರೆದವರು ಕನ್ನಡದ ಅತ್ಯಂತ ಸಜ್ಜನ – ಸಾತ್ವಿಕ ಮೆಲುದನಿಯ ಲೇಖಕರೆಂದು ಹೆಸರಾದವರು ಎಂಬ ವಿವರಗಳು ಕವಿತೆಯ ಪ್ರಖರತೆಯನ್ನು ಅದರ ಚಾರಿತ್ರಿಕ ಸಂದರ್ಭದಲ್ಲಿ ಮತ್ತಷ್ಟು ತೀವ್ರಗೊಳಿಸುತ್ತವೆ. ..'ಸಂಪ್ರದಾಯಸ್ಥ'ರೆಂದೂ 'ಸಪ್ಪೆ' ಎಂದೂ ನವ್ಯರಿಂದ ಟೀಕೆಗೆ ಒಳಗಾಗಿದ್ದ ಕವಿಯೊಬ್ಬರ ಈ ರಚನೆ ಆಧುನಿಕ ಕವಿಸಮಯಗಳಾಗಿ ಸರಳೀಕೃತಗೊಳ್ಳುತ್ತಿರುವ ಸಾಹಿತ್ಯ ಸಿದ್ಧಾಂತಗಳನ್ನೂ ವಿಮರ್ಶೆಯ ಮಾನದಂಡಗಳನ್ನೂ ಪರೋಕ್ಷವಾಗಿ ಪ್ರಶ್ನಿಸುವಂತಿದೆ. 1958 ರಲ್ಲಿ ಪ್ರಕಟವಾದ ವಿ.ಸೀ. ಅವರ ಮೂರನೆಯ ಕವನಸಂಕಲನ "ಹೆಜ್ಜೆಪಾಡು" ನಲ್ಲಿ ಈ ಕವನ ಸೇರಿದೆ. ಇತ್ತೀಚೆಗಷ್ಟೇ ಪ್ರಕಟವಾಗಿರುವ "ವಿ.ಸೀ. ಅವರ ಬೆಲೆಬಾಳುವ ಬರಹಗಳು" (2012, ವಸಂತ ಪ್ರಕಾಶನ, ಬೆಂಗಳೂರು) ಎಂಬ ಸಂಪುಟಕ್ಕೆ ಡಾ.ಜಿ.ಎಸ್.ಆ ಮೂರರು ಈ ಕವನವನ್ನೂ ಆಯ್ಕೆ ಮಾಡಿಕೊಂಡಿರುವುದು ಗಮನ ಸೆಳೆಯುತ್ತದೆ. ಕನ್ನಡದ ಅತ್ಯಂತ ಜನಪ್ರಿಯ ಕವಿತೆಗಳಲ್ಲಿ ಒಂದಾದ "ಮನೆ ತುಂಬಿಸುವುದು" ಎಂಬ ಕವಿತೆಯನ್ನು ಬರೆದವರೇ "ಬಿಟ್ಟುಕೊಡಿ"ಯನ್ನೂ ಬರೆದಿರುವುದು ಎಂಬ ಅಂಶವನ್ನೂ ಮರೆಯುವಂತಿಲ್ಲ.

"ಮನೆ ತುಂಬಿಸುವುದು" ಕವಿತೆಯು 'ನಮ್ಮ ಮನೆಯಂಗಳದಿ ಬೆಳೆದೊಂದು ಹೂವನ್ನು / ನಿಮ್ಮ ಮಡಿಲೊಳಗಿಡಲು ತಂದಿರುವೆವು/ ಕೊಳ್ಳೀರೀ ಮಗುವನ್ನು ಎಮ್ಮಮನೆ ಬೆಳಕನ್ನು / ನಿಮ್ಮ ಮನೆಯನ್ನು ತುಂಬಲೊಪ್ಪಿಸುವೆವು' ಎಂದು ಪ್ರಾರಂಭವಾಗಿ ಈ 'ಮಗು'ವಿನ ಗುಣಗಳನ್ನು ಪಟ್ಟಿಮಾಡುತ್ತ ಮುಂದುವರಿಯುತ್ತದೆ. ಅವಳು, 'ಮರೆ ಮೋಸ ಕೊಂಕುಗಳನ್ನರಿಯವಳಿವಳು. ಇನಿಸವಿಶ್ವಾಸವನು ಕಂಡರಿಯಳು. ಕಷ್ಟಗಳ ಸೈಸದಿಯೆ ಕಾಣದಯೆ ಬೆಳೆದವಳು, ಮಡದಿಯಾಗಿ, ಸೊಸೆಯಾಗಿ, ಸೋದರಿಯಾಗಿ, 'ಎರಡುಮನೆ'ಗಳ ಹೆಸರು ಖ್ಯಾತಿಗಳು ಉಳಿವಂತೆ ಇವಳು ಬಾಳಬೇಕೆಂದು ಅವಳ ತಂದೆ ತಾಯಿಯರ ಹಂಬಲ ಹಾರೈಕೆ. ಈ ಮನೆ ತುಂಬಿಸುವ ಹಾಡು ಆ ಹೆಣ್ಣುಮಗುವಿನ

ಬದಲಾಗುವ ಅಸ್ಮಿತೆ ಮತ್ತು ಪಾತ್ರಗಳನ್ನೂ ಅಷ್ಟೇ ಸೂಕ್ತವಾಗಿ, ಮನೋಜ್ಞವಾಗಿ ಸೂಚಿಸುತ್ತದೆ. 'ಹೆತ್ತವರ ಮನೆಗಿಂದು ಹೊರಗಾದೆ, ನೀ ಮಗಳೆ, ಈ ಮನೆಯೆ ಈ ಇವರೆ, ನಿನ್ನವರು ಮುಂದೆ; ಇವರೆ ತಾಯ್ಗಳು, ಸಖರು, ಭಾಗ್ಯವನು ಬೆಳೆಸುವರು ಇವರ ದೇವರ ನಿನ್ನ ದೇವರುಗಳು'. ಇಷ್ಟೆಲ್ಲ ನಿರೀಕ್ಷೆಗಳನ್ನು ಹೊತ್ತು ಹೊಸ ಕನಸುಗಳನ್ನು ಕಾಣುತ್ತ ತನ್ನ ಅಸ್ತಿತೆಯನ್ನೂ ಬದಲಿಸಿಕೊಂಡು ಗಂಡನ ಮನೆ ಸೇರುವ ಎಲ್ಲ ಹೆಣ್ಣುಮಕ್ಕಳ ಬಾಳೂ ಮುಂದೆ ಅಷ್ಟೇ ಸುಂದರವೂ ಸಾರ್ಥಕವೂ ಆಗಿರುವುದಿಲ್ಲ ಎಂಬುದು ಒಂದು ಕಟುಸತ್ಯ. ಮಾನವ ಸಮಾಜದ ಒಂದು ದೊಡ್ಡ ವ್ಯಂಗ್ಯ ಮತ್ತು ದುರಂತ. ಎಲ್ಲವನ್ನೂ ಮೌನವಾಗಿಯೇ ಸಹಿಸಿಕೊಂಡು ಒಳಗೇ ನೊಂದು ನಾಶವಾಗುವವರದು ಒಂದು ಮಾದರಿ; ಗೊಣಗುತ್ತಾ, ಆಗಾಗ ಕ್ಷೀಣದನಿಯಲ್ಲಿ ಪ್ರತಿಭಟಿಸುತ್ತಾ ಆದರೆ ಅಂತಿಮವಾಗಿ ಆ ಚೌಕಟ್ಟಿನಲ್ಲಿಯೇ ಉಳಿಯುವವರದು ಮತ್ತೊಂದು ಮಾದರಿ, ಸಹಿಸಿ, ಸಹಿಸಿ, ಕಡೆಗೊಮ್ಮೆ ಸಿಡಿದು ಆ ಚೌಕಟ್ಟನ್ನು ದಿಟ್ಟತನದಲ್ಲಿ ದಾಟಬಯಸುವವರು ಅಲ್ಪಸಂಖ್ಯಾತ, ವಿರಳ ಮಾದರಿ. ವಿ.ಸೀ. ಅವರ "ಬಿಟ್ಟುಕೊಡಿ" ಕವಿತೆಯು ಇಂಥ ವಿರಲ ಮಾದರಿಯನ್ನು ಪ್ರತಿನಿಧಿಸುವುದರಿಂದ ಚಾರಿತ್ರಿಕವಾಗಿ ಒಂದು ಅಪೂರ್ವವೂ ಅನನ್ಯವೂ ಆದ ರಚನೆ ಎನಿಸಿಕೊಳ್ಳುತ್ತದೆ. ಆ ಕವಿತೆ ರಚಿತವಾದ ಕಾಲಘಟ್ಟಕ್ಕೂ ನಮ್ಮ ಈ ಕಾಲಘಟ್ಟಕ್ಕೂ ಸಾಕಷ್ಟು ವ್ಯತ್ಯಾಸಗಳಿದ್ದರೂ ಈ ಕಾಲದ ಇಂಥ ಹೆಣ್ಣುಮಕ್ಕಳ ದನಿಯಾಗಿಯೂ ಈ ಕವಿತೆಗೆ ಸಮಕಾಲೀನ ಪ್ರಸ್ತುತತೆ ಖಂಡಿತಾ ಇದೆ. "ಮನೆ ತುಂಬಿಸುವುದು" ಕವನದ ಮುಂದುವರಿಕೆಯಾಗಿ "ಬಿಟ್ಟುಕೊಡಿ" ಕವನವನ್ನು ಓದಿದರಂತೂ ಲಿಂಗಾಧಾರಿತ ಸಮಾಜವೊಂದರ ಆದರ್ಶ–ವಾಸ್ತವಗಳ ನಡುವಣ ವೈರುದ್ಧ ಮತ್ತು ಬಿಕ್ಕಟ್ಟುಗಳ ಒಂದು ಮಾದರಿಯೇ ನಮ್ಮ ಮುಂದೆ ಕಟ್ಟಿಕೊಳ್ಳುವಂತಿದೆ.

"ಒಳ್ಳೆ ಮಡದಿಯಾಗಿರಲು ಯತ್ನಿಸಿದೆ. ಬೇಸರಾದುದೆನಗೆ" ಎಂದು ಕವನ ಓರ್ವ ನತದೃಷ್ಟ ಪತ್ನಿಯ ನಿವೇದನೆಯಿಂದ ಪ್ರಾರಂಭವಾಗುತ್ತದೆ. ಕವನದ ಮೊದಲ ಎರಡು ಭಾಗಗಳಲ್ಲಿ ಈ ಬೇಸರಕ್ಕೆ ಕಾರಣಗಳೇನೆಂದು ಅವಳು ನಿರೂಪಿಸುವ ಕ್ರಮದಲ್ಲಿ ಹದಿನಾರು ವರುಷಗಳ ಅವಳ ದುರ್ಭರ ಬಾಳಿನ ಚಿತ್ರಗಳು ಬಿಂಬಿತವಾಗುತ್ತ ಹೋಗುತ್ತವೆ. 'ತಾಯಿ' ತಂದೆ ಮನೆ ಎಲ್ಲ ಬಿಟ್ಟು ನಾ ನೀವೆ ಎಲ್ಲವೆಂದೆ. "ಮನೆ ತುಂಬಿಸುವ ಹಾಡು" ಪದ್ಯದಲ್ಲಿ ಪ್ರಕಟವಾಗುವ ನಿರೀಕ್ಷೆಗಳು ತಲೆಕೆಳಗಾದ ಸ್ಥಿತಿಯೊಂದು "ಬಿಟ್ಟುಕೊಡಿ"ಯಲ್ಲಿ ಮೂಡುತ್ತ ಹೋಗುತ್ತದೆ. ಈ ಎರಡು ಕವನಗಳ ಶೀರ್ಷಿಕೆಗಳಲ್ಲಿಯೇ ಈ ಎರಡೂ ಮನಸ್ಸ್ಥಿತಿಗಳ ನಡುವಣ ಗಾಢ ವೈದೃತ್ಯ ವ್ಯಕ್ತವಾಗುವಂತಿದೆ. ಮತ್ತೊಂದು ಮನೆಯನ್ನು ತನ್ನ ಮನೆಯನ್ನಾಗಿಸಿಕೊಳ್ಳುವ ಹಂಬಲದಲ್ಲಿ ಗಂಡನ ಮನೆ ಸೇರಿದ ಈ ಹೆಣ್ಣಿನ ಅನುಭವವೇನು? 'ಇಲ್ಲೊ ಮಾಸ, ದಿನ, ವಾರ, ವರ್ಷವೂ ನಿಮ್ಮ ವಿರಸವೊಂದೂ ಆವ ಒಳವಿನಲಿ ಎಂತು ಅನುವಿನಲಿ, ಏನ ಗೈದರೇನು. ಅಲ್ಲಿ ಹೋಗದಿರು, ಇಲ್ಲಿ ಬಾರದಿರು– ಓ, ಎಲ್ಲಿ ಹೋದೆ ನಾನು?' ಈ ಕವಿತೆಯಲ್ಲಿ ಬಳಕೆಯಾಗಿರುವ ಸರಳ ಸಾಧಾರಣ ಪದಗಳಲ್ಲೇ – ಗೈದು, ತೇದು, ಆ ಹೆಣ್ಣಿನ ಹದಿನಾರು ವರ್ಷಗಳ ಅನುಭವವನ್ನು ಸಾಂದ್ರವಾಗಿ ದಾಖಲಿಸುವ ಶಕ್ತಿ ಇದೆ. ಮದುವೆಯಾಗಿ ಇವಳು ಪಡೆದದ್ದೇನು? 'ಮದುವೆಯಾಗಿ ಸಂತೋಷಬಡುವೆ, ಒಲಿದ ಗಂಡಗೆಂದೆ. ಗಂಡು ಕೈಯ ಒಣ ಬೊಂಬೆಯಾಟದಲಿ, ಬರಿದೆ ಗಾಸಿಗೊಂಡೆ. ಸವೆದು ಯೌವನವು ಅಳಿಯೆ ಸೌಮನವೂ ಬಾಳು ಸಿಪ್ಪೆಯಾಯ್ತು, ಬಾಳ ಚಿಲುಮೆ ಕಣ್ಮುಚ್ಚಿ ಸರಸ ಹಿಂಡಿ ಹಿಪ್ಪೆಯಾಯ್ತು.

ಮೊದಲ ಎರಡು ಭಾಗಗಳಿಗೇ ನಿಂತಿದ್ದರೂ ಇದೊಂದು ಹೆಣ್ಣಿನ ಸ್ಥಿತಿಯನ್ನು ಮನೋಜ್ಞವಾಗಿ ಚಿತ್ರಿಸುವ ಪದ್ಯವಾಗಿ ಉಳಿಯುತ್ತಿತ್ತು. ಆದರೆ ಈ ಪದ್ಯವನ್ನು ನವೋದಯ ಸಂದರ್ಭದ ಇಂಥ ಬಹಳಷ್ಟು ರಚನೆಗಳಿಗಿಂತ ಭಿನ್ನ ಎನಿಸುವಂತೆ ಮಾಡುವುದು ಇದರ ಮೂರನೆಯ ಭಾಗ. ಈ ಕವಿತೆಯ ನಿರೂಪಕಿಯು ತನ್ನ ಸ್ಥಿತಿಯನ್ನು ಕೇವಲ ಮಂಡಿಸುವುದರಲ್ಲಿ ನಿಲ್ಲುವುದಿಲ್ಲ. ಆ ಸ್ಥಿತಿಯನ್ನು ದಾಟಬಯಸುವ ಎದೆಗಾರಿಕೆಯನ್ನು ತೋರುತ್ತಾಳೆ. ಮುಂದೆ ನವ್ಯ ಮತ್ತು ನವ್ಯೋತ್ತರ ಸಂದರ್ಭಗಳಲ್ಲಿ ಇಂಥ ಹಲವು ಪಾತ್ರಮಾದರಿಗಳನ್ನು ನಾವು ಹೆಚ್ಚಿನ ಸಂಖ್ಯೆಯಲ್ಲಿ ಗಮನಿಸುತ್ತೇವೆ. ಅಂಥ ಪಾತ್ರಗಳ ಒಂದು ಮೂಲಮಾದರಿ ಎಂದು ವಿ.ಸೀ. ಕವನದ ಈ ಪಾತ್ರವನ್ನು ಪರಿಭಾವಿಸಿ ಕೊಳ್ಳಬಹುದಾಗಿದೆ.

ನಿಮ್ಮ ದಾರಿ ನೀವಿನ್ನು ನಡೆಯುತಿರಿ
ಎನಗೆ ಬಿಡುತೆ ನೀಡಿ
ಸಾಕು ಈಸುದಿನ ಕಂಡುದುಂಡುದೇ
ಪಾಡುಪಟ್ಟು ಬೇಡಿ
ಎಲ್ಲಿ ದುಡಿದರೂ ದಿನಕೆ ದೊರೆಯುವುದು
ಹೇಗೊ ಹಿಡಿಯ ಕೂಳು
ಹಂಗು ಸಾಕು ಕೈಮುಗಿವೆ ಬಿಟ್ಟುಕೊಡಿ
ನಾಳೆ ಬೇರೆ ದಾರಿ
ಹೊಸತು ಬೆಳಕು ಕಂಡೀತು ಕಣ್ಗೆ
ಉಸಿರ ಉಬ್ಬಸವು ನಿಂತು
ಮರೆಯ ಸೇರೆ ಕಣ್ಣೀರು ಒಣಗಿ ಉರಿ
ವೆದೆಗೆ ತಂಪತಳಿದು
ಅರಿತರಿಲ್ಲದಿಹ ಊರು ಕೇರಿಗಳ
ತಾಯಿಮಡಿಲ ಸೇರಿ
ನಾಳೆ ವಿಧಿಯು ಹೊಸತೇನ ತರುವುದೋ
ನೋಡ ನಡೆವೆ ಸಾರಿ

ಕೃಪೆ: ಸಾಪ್ತಾಹಿಕ ಸೌರಭ

# ಚಕಿತ

ರಂಗನು ನಬಿಯನು ಕೇಳಿದನು
ಗುಂಗಿನಲೊಂದು ಗುಟ್ಟನ್ನು
ಮೊನ್ನೆ ಪೇಟೆಗೆ ಹೋದಾಗ
ನಿಮ್ಮಂಗಡಿ ಎದುರಿಗೆ ನಿಂತಾಗ
ಆಡೊಂದನು ನಾ ನೋಡಿದೆನು
ಹೀಗೇ ಮಾತಿಗೆ ಕೇಳಿದೆನು
ಕೆಂಪನ ಅರಿವೆ ಕೋಡಿಗೆ ಇತ್ತು
ಎಲೆಯೊಂದನು ಅದು ಮೆಲುತಲಿತ್ತು
ಮೈಯೆಲ್ಲ ಕರಿಯಾಗಿತ್ತು
ಅಬ್ಬು ಹತ್ತಿರ ನಿಂತಿತ್ತು
ಯಾರನೋ ಏನೋ ಕರಿತಿತ್ತು
ಮತ್ತೆ ಬಾಯಾಡಿಸುತಿತ್ತು
ಈ ದಿನ ಹೇಗೋ ಬೇರಾಯ್ತು
ಆಡು ಪೂರಾ ಬಿಳಿಯಾಯ್ತು
ಗೆಳೆಯಾ ಏನಿದು ಗಮ್ಮತ್ತು
ಎರಡೇ ದಿನದ ಕಸರತ್ತು
ಬಣ್ಣವು ಹೇಗೆ ಬದಲಾಯ್ತು
ಎಂಥ ಸ್ನೋ ಹಚ್ಚಿದಿರಿ
ಯಾವ ಪಾವಡರ ಹಾಕಿದಿರಿ
ನನಗೂ ಹೇಳೋ ದಯವಿಟ್ಟು
ಅಕ್ಕನಿಗಾಗಿದೆ ಬಿಕ್ಕಟ್ಟು

**– ದಾಕ್ಷಾಯಣಿ ಯಡಹಳ್ಳಿ**

# Fresh insights into the lives of devadsi-s

The Bharata – Ilango Foundation for Asian Culture (BIFAC), Chennai, organized a lecture by B. Herambanathan, from Tanjavur on "The contribution of Devadasi-s to Bharatnatyam". Herambanathan is the son of Bavu Pillai and Jeeva Amma – a dancer – and the son-in-law of devadasi Doraikannu. The Managing Trustee of BIFAC, Dr. Padma Subrahmanyam introduced the subject and the speaker. She pointed out that the devadasi tradition had for long been misunderstood and misinterpreted. A devadasi was properly initiated into the divine order through 'mantropadesa' and they contributed to the moral, ethical, technical and artistic value of Bharatanatyam.

Herambanathan said he was proud of his lineage of his lineage of devadasi-s belonging to the Tanjavur region. A few excerpts from his lecture;

According to oral tradition the devadasi-s of Tanjavur came from Andhra Pradesh and were known as 'taiyyalkara kudumbam' (family of tailors). Education for them meant completing Standard V, enough to maintain a 'dhobi account'. They wre intiated inot dance at the age of seven, and some seven years after they learnt a margam, they had their arangetram. They were well versed in languages like Tamil, Telugu, Sanskrit and Marathi. Some devadasi-s have written kavya-s in these languages. Attaining puberty was an occasion for celebration that went on for ten days when renowned musicians performed. A sadir kutcheri was specially organized for the occasion. When the devadasi-s danced, the accompanists stood behind them and often wore a uniform. The nattuvanar was noit only adept in the art of dance but also in playing the mridanga. A famous devadasi, Kamukannu Amma (mother of the well known mridanga vidwan. T.Upendran), who was known for her beauty, was the first lady to do nattuvangam. The devadasi-s wee known for their abhinaya as they were good singers and knew the language well. They were adept in kummi, kolattam and pinnal kolattam.

Many devadasi-s had knowledge of the "64 arts", wre respected by kings and scholars, were spiritually oriented and venerated in society. It is mentioned in the work called Rudraganika Kavuhuvam tha the devadasi-s wre also known as Saani, Matangi, Basavi and Mahani. Tirugnanasambandar has described them as 'sirridai kannimaar'.

According to the Agni purana, Linga purana and Bhavishya purana the appearance of a dasi was a good omen. She had the right to coronate the king in the absence of the rajaguru, and was given the authority to choose the successor to the throne.

Many devadasi-s wre known for their charity and their affinity to temples. Rajali Amma donated her necklace and meltedthe zari from her sarees to make a golden pot for the Mariamman temple. Ponnammal, a devadasi attached donated money to carve a golden utsavamoorti of the Lord.

Some devadasi-s swept and cleaned the temple premised, washed the vastra (cloth) of the deities, and cleaned the vessels and jewels. They always wore their characteristic note ornaments – 'natthu' and 'bullakku'. During worship, the devadasi danced to the accompaniment of the nattuvanar, mridangist and the flautist. She also performed when the Odhuvar sang the Tevaram during pooja. Following this she performed the 'kudavilakku' (kumbhaharati) for the Lord before handing it over to the priest. Such was the honour given to devadasi.

After Herambanathan's talk, Padma Subrahmanyam recalled how she learnt some nuances of neck movements from Andal Amma and Viralimaai Annammal. She shared her experience of learning padam-s from Mylapore Gowri Amma, the last devadasi of the Kapaleeswara temple. Padma also narrated the touching story of the devadasi of Srirangam who helped put an end toi the sultan's rule in south India in the 13$^{th}$ century. The devadasi, when asked what she wanted in return, replied she would die happily if she were to receive the temple honours on her death – raw rice from the temple kitchen and the saree from the Goddess to cover her body.

Herambanathan's emotion packed lecture had many pignant moments. I offered many new insights into the lives of the devadasi-s which need to be understood in the proper perspective.

**- Dr. Gayatri Kannan**

(Bharatanrityam exponent, Carnatic vocalist, with a doctorate in Sanskrit)

*Courtesy:* news & notes

## JANUARY 2013
## PROGRAMME AT ASSOCIATION

Flag hoisting on 26th January 2013
at 10.00 a.m.

❀ ❀ ❀

**'ನೇಸರು' ವಿನ ಎಲ್ಲಾ ಓದುಗರಿಗೂ**
**ಸಂಕ್ರಾಂತಿ ಹಬ್ಬದ**
**ಹಾಗೂ**
**ಗಣರಾಜ್ಯೋತ್ಸವದ ಶುಭಾಶಯಗಳು**

# FAITH, FEAR AND BELIEF

Among many factors that contribute to success in life, the most powerful one is faith. Faith is strength. It is even stronger then reason. Faith is a mysterious power having a profound soul force. It has a strong hold on the individual. One may say even reasoning is based on some faith. Faith is the basis of all activities in one's life. Faith brings stability and security, without faith fear and panic can take over one's life, creating instability and paranoia. Loss of faith means loss of hope.

Fear is the psychic weakness. Faith is the strength, fear and faith cannot co-exit. Both are powerful by themselves. Each is capable of driving away the other. If mind is always fortified with faith, fear can never creep in. It is only 'when the' faith is feeble fear can overpower it. The intensified form of fear is tension. Almost all people have fear – fear of failure, fear of losing reputation, fear of ill health, fear of enemies and fear of death. Fear and fate have no sway over the minds filled with faith. Faith is a torch to drive away fear and fate.

One has to harness the power of faith. What differentiates one person from the other is not the lack of faith, but it is what they believe in. Between man and man there is a clear distinction, both in their individual mental attitude and intellectual grasp. As such a set scheme to control and develop mind and intellect is impracticable. Most of us have more faith in newspapers than in an eye witness account.

The person lacking in faith is fearful and doubtful. Child like faith in God and in one's own potential is the key to success. The river of faith is always flowing and one can choose to drink the water and quench his thirst. Other wise die of thirst of doubt and fear. Choice is yours.

There is a general misconception that intellectuals ignore the importance of faith, but it is not so. Faith has a distinct role to play in human life. In fact humanity cannot survive without the element of faith. The fact that you are the son or the daughter of your parent is built in and sustained through faith. You believe your mother when she says so and so is your father. When you travel in any vehicle you have faith that the driver takes you to your destination. Countless events in your life rest on faith. They are not blind faiths. Faith does not have eyes, but it is the candle whose light takes you and your struggling soul through the dark alleys of life, giving protection against gloom and frustration. Perhaps one may say superstitious faith is better than no faith at all.

There are two brilliant definition of faith. One by a Christian mystic, Joel Goldsmith, who says, "Faith is an entity I do not know until I come to know, what I believe in". Another by Rabindranath Tagore, who says, "Faith is a bird that feels the light and sings while the dawn is still dark". Faith is the substance of things hoped for the evidence of things not seen.

Faith is an important factor that comes after certain period of questioning and doubting. Similar to religious superstition there is also superstition in science. Priests took up the religious work as their mission, while scientists, who are the priests of physical laws, normally follow what great scientists, Darwin and Auxely have cited. 99% of what we call scientific knowledge is mere theory. True science asks us to be cautious. Begin with disbelief, analyse, first prove everything and then accept it. Some of the beliefs in modern science are not proved. In mathematics theories are working hypothesis. In science knowledge comes first and then faith follows. In spirituality faith comes first and knowledge follows.

Religion as it is taught all over the world is based upon faith and belief. In most cases it consists of only different sets of theories. Perhaps it may be the reason why one finds all religions quarreling with one another. A mistake consistently made by faith healers is that they think faith directly heals the person. Faith does not cover all grounds. The greatest religion is to be true to yourself. If you cannot exist how can God exists or anybody else. Faith is one of the potent factors of humanity and of all religions.

The closest word in Indian Language to faith is "Shraddha". In Shraddha mind starts with faith in something that does not end there. The intellect pursues it until it is assimilated and made one's own. With faith one gains mere knowledge of a subject while shraddha provides one with wisdom to live with it. When intellect examines and reflects upon the knowledge to gained, it metamorphoses into wisdom. Knowledge provides you with information, wisdom brings about transformation

The faith in ourselves is the greatest help to us. If faith in ourselves has been more extensively practiced, I am sure very large fractions of evils and miseries that we face would vanish.

**K.N. KIRTHI**

No one should borrow other's faith. If one is pure and sincere his own faith will gradually show him the path. Throughout the history of mankind if any motive power is more potent then other in the lives of men and women it is the faith in themselves. One will learn to have faith in himself during his life after certain bitter experiences. It is this great faith that will make the world better. Faith in oneself will do anything and everything. First have faith in yourselves. One anecdote regarding faith is often told. When there is scarcity of rain the fields are parched brown leading to drought. Every where in the world people offer prayers to God. The ministers of the church and the priests of the temple were called to offer prayers or do yagna or sacrifice to rain God to shower rains. They gather with holy books and rosaries at a selected spot. From the middle of the crowd emerged a little pretty girl with an umbrella. When asked, she replied when you do something in life with faith it will succeed. After your prayers it rains and I have to go home.

I agree with you so far that faith is a wonderful insight and that it can alone save anything and everything. But there is a danger in it of breeding fanaticism which bars further progress. Finally, it is the faith that makes the lion of the man.

It is very well to talk about liberty, freedom and independence. But without humility submission veneration and faith there will not be any religion. One will accept nothing, unless it has a seal of reason. The other has the faith, what he cannot see he believes. Both are necessary. A bird cannot fly with one wing.

Faith is a growing belief rooted in understanding. As the faith increases mind becomes more and more efficient. Success is directly proportional to the depth of faith one has in himself as well as in God. Faith that which stands million chances of doubt will bring perfection. If you think that faith in God is doing favour

*Contd. Next pg.*

# From Ganges to Gangrape - A Himalayan Descent

When we are eyeball to eyeball with an incident that has condemned our nation to the Gallery of Infamy, and when a “hapless nude year” stares us upfront in the rearview mirror, how to do we bring ourselves to voice “Happy New Year!” to one another today? Indeed, the raping of the 23-year old Delhi woman is not just one stray incident of gangrape that has pitchforked us into this terrible plight asudden, but a steady spate of “scams” that overarched the whole course of the just-passed year. By all accounts, those “scams” too were nothing shy of gangrapes, with politico-bureaucratic ganglords taking competitive turns to outrage the modesty and integrity of their very motherland. The same beasts of prey - and their litters - have also indulged themselves in countless carnal rampages on helpless women, with all impunity and immunity. Can we now, in all truthfulness, expect passage of - and adherence to - any Rape Laws from people who are born to rape laws? It is one of the sorriest contemporary truths that brilliant criminal credentials command high premium in the political enterprise of India, and is there anyone still unaware of it?

As the New Year begins, New Delhi stands nudely in the commonwealth of capitals, baring the most scandalous rape statistic among all the metros of India – 635 cases at the last “official” count. [Presumptively, ‘1 rape-every 20 minutes’ is our National Rape Rate and this day, India stands 3rd on the global rape chart.] India Gate, with its long-winding stream of candle-bearing marchers, is today a searing symbol of all the “Gates” that scarred the annals - and account books - of this country in its post-Independence decadence. And the magnificent Raisina Hill has now come to beacon a blatant citadel of crime and dissoluteness.

Above all else, with “gangrape” spreading like gangrene (the rapists are beyond therapists) right across the radius of India, Ganges has made its way to “Gangrape” as the lead motif of India-2013. Woe is me! What a comedown for a country whose proudest claim to fame has always been its spiritual genius!!

India has now been leeched into a multiorgan-failed, ventilator-hooked state, and ganghanging of the rapist sextet behind the above incident doesn’t even scratch the sheath of the “gangbang gene” that has invaded and pervaded the very nucleus of our public domain. Although legal deterrents and preventive self-defence techniques are undeniably imperative, what is of far-reaching consequence in addressing this rogue “gene” is multidisciplinary awareness building at Ground Zero. And to carry out this mammoth mission, none could be better qualified than our religious leaders meditating and chanting for universal wellbeing in their sanctums and monasteries; our spiritual orators spitting fireballs at mythical Ravana-s, Duryodhana-s and dispensing florid homilies from their pulpits; our literary luminaries spinning out acres of print matter on a sweep of social issues; and our film & teleserial makers commanding total control over the mindscape of hundreds of thousands of families with their “sensational” scripts. Society all through history has voluntarily offered an overabundance of respect, recognition and reward to these moral and mental mentors, and what is the point if society cannot ask them to walk their talk and prove their mettle, at least in this time of its grave crisis?

Finally, to revert a while to Delhi’s “rape of wrath,” how do we make sense of “RIP” to a ripped, stripped and raped young woman?! Doesn’t it seem downright insensate that our TV channels are now wailing, “RIP, India’s Daughter!”? Let that young woman’s trampled spirit spring up as the trigger and rallying point of a vigorous new women’s movement in our country and everywhere else! And, in our calendars henceforward, let ***Dec-16*** leap out in red-hot letters as ***Alternate R-Day*** – “***R***apistan” Day or “***R***ipPublic” Day, if you will – in solemn salutation to all those women who laid down their lives daring against diabolic acts of sexual terrorism, womanslaughter and all other shades of gender-hate blotting the white in our national tricolor! (The first case that pops into memory in this context is that of Aruna Shanbaug, one of the worst surviving victims of male depredation known to history.)

As the ongoing Century enters its teens, let us hope for the dawn of a new order in our ecosystem, where women are no more members of a “second” human species, and where women and men happily co-evolve as co-heirs to the grace and gaiety of life.

Let MMXII AD bring a new meaning and energy to our life!.

**S G Seetharam**
(c_ta_rom@yahoo.co.in)

## FAITH, FEAR AND BELIEF

to him you are mistaken. Your faith in God or Guru does nothing to both of them. People have faith in the world, but the world is like a soap bubble. People who say that they have faith in them do not know who they are. People think they have faith in God, but they really do not know who the God is. Faith gives you strength. It brings you stability centeredness, calmness and love. Faith is your own blessing. Faith is your own wealth. If you lack faith you have to pray to God. But to pray to God you need faith. This is a paradox.

To conclude there are three types of faith:-

1) Faith in yourself:-

Without faith in yourself, you think “I cannot do this, this is not for me”.

2) Faith in the world:-

One should have faith in the world; otherwise he cannot move an inch. One deposits money in the bank with faith that same will be returned to you with interest. If one doubts everything nothing is going to happen.

3) Faith in Divine:-

Have faith in Divine one will evolve.

All these three types of faith are interconnected. One must possess all the three types to be strong and bold. If one starts doubting he will end up in misery only. Never do anything half mindedly. Faith is the great foundation to build your life. Faith makes you full-faithful. □

# ಸವಿನೆನಪುಗಳು ಬೇಕು.... ಸವಿಯಲೀ ಬದುಕು

ಅಲ್ಲವೇ? ಮತ್ತೆ ... ನೆನಪುಗಳ 'ನಿಧಿ' ಮುಚ್ಚಿಟ್ಟಿದ್ದ ಸಂದೂಕದ ಮುಚ್ಚಳ ತೆರೆದುಕೊಂಡಿತು... ಅರೆ! ಇನ್ನೂ ಎಷ್ಟೊಂದಿದೆ, ಅದ್ಭುತವೆನಿಸಿತು. 'ಕಾಲ'ದ ನಡೆ, ಆ ವೇಗ ಯಾರಿಗೆ ಅರಿವಾಗಿದೆ? ಅದು ಹೇಗೆ ಅಂದಿನ ನೆನಪುಗಳು 'ಇಂದು' ಅತ್ಯಮೂಲ್ಯ 'ನಿಧಿ'ಯೆಂದೆನ್ನಿಸಿದೆ, ಅರ್ಥ ತಿಳಿಯುತ್ತಿಲ್ಲ. ಬದುಕಿನ ಓಟ, ಹೋರಾಟದಲ್ಲಿ ಆತ್ಮಾವಲೋಕನ ಕ್ಕೆ ಪ್ರಾಯಶಃ ಸಮಯ ಸಿಗಲಿಲ್ಲವೋ ಏನೋ! ಈಗಲೀಗ ತಮ್ಮಂತಹ ಆತ್ಮೀಯ ಬಂಧುಗಳು, ನನ್ನ ಹೃದಯದ ಭಾವನೆಗಳನ್ನು ಅರ್ಥ ಮಾಡಿಕೊಂಡು, ಸ್ಪಂದಿಸುತ್ತಿರುವುದು ನನ್ನ ಭಾಗ್ಯವಲ್ಲದೆ ಮತ್ತೇನು?

ಎರಡು ದಶಕಗಳ ಕಾಲ, ನನ್ನ ಆಟ, ಪಾಠ, ಊಟ ಎಲ್ಲಾ ಕಳೆದ ಆ ಮನೆಯಿದ್ದ ಬೀದಿಯ ಹೆಸರು 'ಸೋನಾರ್ ಸ್ಟ್ರೀಟ್'. ತಮಾಷೆ ಎಂದರೆ ಅಲ್ಲಿ ಒಬ್ಬ ಅಕ್ಕಸಾಲಿಗನೂ ವಾಸವಾಗಿರಲಿಲ್ಲ. ಇತ್ತೀಚೆಗೆ ಆ ದಾರಿಯಲ್ಲಿ ಹೋದಾಗ ಹೊಸ ಮನೆಗಳು ಹೊಸ ವಿನ್ಯಾಸದೊಡನೆ ತಲೆ ಎತ್ತಿಕೊಂಡಿತ್ತಾದರೂ ಈಗಲೂ ಆ ರಸ್ತೆಗೆ ಅದೇ ಹೆಸರು! ವಾಸ್ತವವಾಗಿ ಹೇಳಬೇಕೆಂದರೆ, ನಮ್ಮ ಮನೆ ಎದಿರಿನಲ್ಲಿ ಗೊಲ್ಲರು ಹಸುಕಟ್ಟಿಕೊಂಡು 'ಹಾಲು' ವ್ಯಾಪಾರ ಮಾಡುತ್ತಿದ್ದರು. 'ಮನೆ' ಮುಂದೆ ಹಾಲು ಕರೆದುಕೊಡುತ್ತಿದ್ದರು. ಶುದ್ಧವಾದ, ಹೊಂಬಣ್ಣದ ಹಸುವಿನ ಹಾಲು! ಒಂದು ಲೋಟ ಇಂಥ ಹಾಲಿನಲ್ಲಿ ಮಾಡಿದ ಕಾಫಿ ಕುಡಿದರೆ ಸ್ಕೂಲಿಗೆ ಹೊರಡುವವರೆಗೆ ಹಸಿವಾಗುತ್ತಿರಲಿಲ್ಲ. (ಬೆಳಿಗ್ಗೆ breakfast) ಮಧ್ಯಾಹ್ನ Lunch ಸಾಯಂಕಾಲ snacks, Tea, Night Dinner, ಈ ಬಗೆಯ ದಿನಚರಿ ಗೊತ್ತೇ ಇರಲಿಲ್ಲ) ಮೊಸರಿನ ಮುದುಕಿ' ಒಬ್ಬಳು ಪುರದಿನ ಬರುತ್ತಿದ್ದಳು. ವಠಾರದ ಮಕ್ಕಳೆಲ್ಲಾ ಅವಳನ್ನು ಸುತ್ತುವರಿದು ಕೈ ನೀಡಿ ನಿಂತರೆ, ಹದವಾಗಿ ಹೆಪ್ಪು ಹಾಕಿದ, ಮೊಸರಿನಲ್ಲಿದ್ದ ಗಟ್ಟಿಯಾದ 'ಗರಣಿ'ಯನ್ನು ದೊಡ್ಡ ಮರದ ಸೌಟಿನಲ್ಲಿ ಮಡಕೆಯಿಂದ ತೆಗೆದು ಹಂಚುತ್ತಿದ್ದಳು. ನಮಗೆ ಯಾವುದೇ ರೀತಿಯ 'ಸೋಂಕು' ಉಂಟಾಗಬಹುದೆಂಬ ಭಯವೇ ಇರಲಿಲ್ಲ. (Infection, pollution, adulteration — ಈ ಪದಗಳನ್ನು ನಾವು ಕೇಳಲೇ ಇರಲಿಲ್ಲ. "ಶಬ್ದಕೋಶಗಳಲ್ಲಿದ್ದ ಈ ಪದಗಳು ಈಗ ಎಲ್ಲರ ಬಾಯಲ್ಲಿದೆ) ಆಗಿನ ಆಹಾರ – ವಿಹಾರ – ವಿಚಾರ ಎಲ್ಲಾ ಸರಳ. ಆದುದರಿಂದಲೇ 'ಆರೋಗ್ಯ'ವಾಗಿರುತ್ತಿದ್ದೆವು. ಸಣ್ಣ–ಪುಟ್ಟ ರೋಗ–ರುಜಿನಗಳಿಗೆ ಮನೆ ಮದ್ದು ಸಾಕಾಗುತ್ತಿತ್ತು. ಈಗಂತೂ ವೈದ್ಯರ ಬಳಿ ಓಡಿದ ಹೊರತು ಉಳಿಗಾಲವಿಲ್ಲ! ಸ್ಕೂಲ್, ಕಾಲೇಜಿಗೆ ನಡೆದೇ, ನಲಿದು, ಹರಟುತ್ತಾ ಹೋಗುತ್ತಿದ್ದೆವು. ಸಿಟಿಬಸ್ ಸೌಕರ್ಯ, ಕಾರು, ಸ್ಕೂಟರ್‌ಗಳ ಓಡಾಟ ಸೊನ್ನೆ. ಹೀಗೂ ಒಂದು ಕಾಲವಿತ್ತೆಂದರೆ ನಂಬುತ್ತೀರಾ? ವಿಶ್ವವಿದ್ಯಾನಿಲಯಗಳಿಗೆ ಹೋಗಿ, ಅಲ್ಲಿನ 'ಗ್ರಂಥಾಲಯ'ಗಳಲ್ಲಿ ಹಾಸ್ಯ ಸಾಮಾಜಿಕ ನಾಟಕಗಳನ್ನು ಹುಡುಕಿ, ನಾವು ನಾವೇ ನಿರ್ದೇಶನ ಮಾಡಿಕೊಂಡು, ವರ್ಷದ ಕೊನೆಯಲ್ಲಿ ನಮ್ಮ ಮಹಾರಾಣಿ ಕಾಲೇಜಿನ ನಾಟಕೋತ್ಸವದಲ್ಲಿ ಭಾಗವಹಿಸಿ ಬಹುಮಾನಗಳನ್ನು ಬಾಚಿಕೊಂಡ ಆ ಘಟನೆಯ ನೆನಪು ಈಗಲೂ ನನಗೆ ರೋಮಾಂಚನವಾಗುತ್ತದೆ. ಆಗ ನಮ್ಮ ಬಳಿ ಕ್ಯಾಮೆರಾ ಎಲ್ಲಿತ್ತು? ಆದರೆ ಆ ಸಂದರ್ಭದ ಚಿತ್ರಣ ಮನಸ್ಸಿನಲ್ಲಿ ಮೂಡಿದ್ದು ಇಂದೂ ಹಸಿರಾಗಿದೆ.

'ಮನೆಯೇ ಮೊದಲ ಪಾಠಶಾಲೆ'ಯೆಂಬ ಮಾತಿದೆ! ನಮ್ಮಮ್ಮ ಯಾವಾಗಲೂ ಹೇಳುತ್ತಿದ್ದ 'ಸರ್ವಜ್ಞ ವಚನಗಳೂ' ಗಾದೆಮಾತುಗಳು, ಒಗಟುಗಳು, ಹಾಡುಗಳು, ಸ್ತೋತ್ರಗಳು, ಈಗಲೂ ಮರೆತಿಲ್ಲ! ಮನಸ್ಸಿನಿಂದ ಸರಿದೇ ಇಲ್ಲ. ನನ್ನ ಬರವಣಿಗೆಗೆ ಇವೆಲ್ಲಾ ಎಷ್ಟೋ ಬಾರಿ ಸಹಕಾರಿಯಾಗಿದೆ.

ನಮ್ಮ ದೇಶಕ್ಕೆ ಅದೇ ತಾನೇ ಸ್ವಾತಂತ್ರ್ಯ ಲಭಿಸಿತ್ತು. ನಮ್ಮ ಪಕ್ಕದ ಮನೆಯಲ್ಲಿ ಶ್ರೀಯುತ ಎಂ. ಎನ್. ಜೋಯಿಸ್ ಎಂಬುವರು ವಾಸವಾಗಿದ್ದರು. ಅವರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ ಜೈಲು ವಾಸ ಅನುಭವಿಸಿದ ಕಥೆಗಳು ಅವರ ಸರಳ, ಶುಭ್ರ, ಜೀವನಶೈಲಿ, ತ್ಯಾಗ ಮನೋಭಾವ ಈ ಎಲ್ಲಾ ನನ್ನ ಮನಸ್ಸಿನಲ್ಲಿ ಅಚ್ಚೊತ್ತಿ ನಿಂತಿದೆ. ಇಂದಿಗೂ 'ಮಹಾತ್ಮಾಗಾಂಧಿ' ಅವರ ಜೀವನದ ತತ್ವಗಳು, ನನ್ನ ಮಾರ್ಗದರ್ಶಿ ಸೂತ್ರಗಳು. ನಮ್ಮ ಮನೆಯ ಮುಂದಿನ ರಸ್ತೆಯಲ್ಲಿದ್ದ 'ಸುಬ್ಬರಾಯನ ಕೆರೆ' ಸ್ವಾತಂತ್ರ್ಯ ಹೋರಾಟಗಾರರು (ಮೈಸೂರಿನ) (ನೀರೆಲ್ಲವನ್ನೂ ಹರಿಬಿಟ್ಟ ಖಾಲಿ ಸ್ಥಳ) ಸಭೆಗಳನ್ನು ನಡೆಸುತ್ತಿದ್ದ, ಒಂದು (Nerve centre) ಹಿಂದೂ ಮುಖಂಡರಷ್ಟೇ ಅಲ್ಲದೆ, ವಿದ್ಯಾರ್ಥಿಗಳು, ಗೃಹಸ್ಥರು, ಗೃಹಿಣಿಯರು, ಇನ್ನೂ ಅನೇಕರು ದೇಶದ ಸ್ವಾತಂತ್ರ್ಯದ ಬಗ್ಗೆ ಭಾವನೆಗಳನ್ನು ತುಂಬಿಕೊಂಡಿರುವವರು ಇಲ್ಲೇ ಸೇರಿ ಮುಂದಿನ ಕಾರ್ಯಭಾರವನ್ನು ಯಾವ ರೀತಿ ಮಾಡಬೇಕೆಂದು ನಿರ್ಧರಿಸುತ್ತಿದ್ದರು. ಈ ಸ್ಥಳದಲ್ಲಿ ಅಗಣಿತ ರ್‍ಯಾಲಿಗಳು ಸಭೆಗಳು ನಡೆದಿವೆ. 'ಮೈಸೂರು' ಈಗಿನಷ್ಟು ಬೆಳೆದಿರದ ಕಾಲದಲ್ಲಿ 'ಸುಬ್ಬರಾಯನ ಕೆರೆಯ' ನೀರು ಸರಬರಾಜು ಆಗುತ್ತಿತ್ತು (Water body). 20ನೆಯ ಶತಮಾನದ ಆದಿಯಲ್ಲಿ ನೀರು ಇಂಗಿ ಹೋಯಿತೆಂಬುದಾಗಿ ತಿಳಿದುಬಂದಿದೆ. ಪಕ್ಕದಲ್ಲಿಯೇ ಇದ್ದ ರಾಯರ ಮಠಕ್ಕೆ 'ಗುರುವಾರ' ತಪ್ಪದೇ ಹೋಗುತ್ತಿದ್ದೆವು.

"ಈಶಾವಾಸ್ಯಂ ಇದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್।
ತೇನ ತ್ಯಕ್ತೇನ ಭುಂಜೀತಾ ಮಾ ಗೃಧಃ ಕಸ್ಯಸ್ ವಿದ್ಧನಮ್॥"

(ಇತ್ತೀಚೆಗೆ ರಾಮಕೃಷ್ಣಾಶ್ರಮದ ಪ್ರಕಟನೆ" ಉಪನಿಷತ್‌ಭಾವಧಾರೆ"ಯಲ್ಲಿ ಈಶಾವಾಸ್ಯ ಉಪನಿಷತ್' ಓದುತ್ತಿದ್ದಾಗ) ನಾನು ಹಿಂದಿ ಭಾಷೆ ಕಲಿಯಲು ಹೋಗುತ್ತಿದ್ದ 'ಶಾಲೆ'ಯ ನೆನಪುಗಳು ಬಂದವು. ದಕ್ಷಿಣ ಭಾರತೀಯರಿಗೆ ಹಿಂದಿ ಭಾಷೆ ಕಲಿಸಿಕೊಡುವ ಕಾರ್ಯಕ್ರಮವನ್ನು ಹಮ್ಮಿಕೊಂಡ, ದಕ್ಷಿಣಭಾರತ ಹಿಂದಿ ಪ್ರಚಾರ ಸಭೆಯ ಅಡಿಯಲ್ಲಿ, ಉಚಿತವಾಗಿ ಭಾಷೆ ಕಲಿಸಿಕೊಡಲು ಬಂದವರಲ್ಲಿ ನಾವು ಪ್ರೀತಿಯಿಂದ ಕರೆಯುತ್ತಿದ್ದ ಮೌನಿ ಒಬ್ಬರು! (ಅವರು ನೃತ್ಯ ಶಾರದೆ, ಪ್ರಖ್ಯಾತ ಸಿನಿಮಾ ನಟಿ, ವೈಜಯಂತಿಮಾಲಾರವರ ದೊಡ್ಡಮ್ಮ) ನೆನಪು ಮಾಸಲು–ಮಾಸಲು! (ಎತ್ತರ ನಿಲುವು, ಗೌರವರ್ಣದ ಮಹಿಳೆ ಆಭರಣಗಳ 'ಹೊರೆ' ಇಲ್ಲವೇ ಇಲ್ಲ. ಶ್ವೇತ ವಸ್ತ್ರಧಾರಿ). ಅಲ್ಲಿ ನಾನು ಕಲಿತಿದ್ದು ಬಹಳ! ಭಗವದ್ಗೀತೆ ಶ್ಲೋಕಗಳು, 'ಚರಕ'ದಿಂದ ನೂಲು ತೆಗೆಯುವ 'ಕಲೆ', ಒಳಾಂಗಣ ಕ್ರೀಡೆಗಳು, 'ಪ್ರಥಮ' ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣಳಾದೆನು. ಬಹಳ ಶ್ರದ್ಧೆಯಿಂದ ಓದುತ್ತಿದ್ದೆನು. ಮನೆಯಿಂದ ದೂರ ಇದೆಯೆಂದು ಮುಂದುವರಿಸಲು ಮನೆಯವರು ಒಪ್ಪಲಿಲ್ಲ. ಆದರೆ ನಾನು 'ಛಲ ಬಿಡದ ವಿಕ್ರಮ' ನಂತೆ ಹಠ ಹಿಡಿದು, ಮನೆಯಲ್ಲಿಯೇ 'ಶಬ್ದಕೋಶ' ತರಿಸಿ ಓದಿಕೊಂಡು ಮುಂದಿನ ಪರೀಕ್ಷೆಗಳನ್ನು ಮುಗಿಸಿದೆನು. ಆ ಕಾಲದಲ್ಲಿ ದೂರದರ್ಶನ ಇರಲಿಲ್ಲ. (ಒಂದು ದಿನ ಈ ಮೂರ್ಖ ಪೆಟ್ಟಿಗೆ ಮನೆ ಮನೆಗೂ ನುಗ್ಗಿ ನಮ್ಮನ್ನು ಅದಕ್ಕೆ ಅಂಟಿಕೊಳ್ಳುವಂತೆ ಮಾಡುವುದೆಂದು ಕನಸಿನಲ್ಲೂ ನೆನೆಸಿರಲಿಲ್ಲ ಬಿಡಿ!) 'ರೇಡಿಯೋ ಸಿಲೋನ್', 'ಬಿನಾಕಾ ಗೀತ್ ಮಾಲಾ' ನಲ್ಲಿ ಅಮೀನ್ ಸಯಾನಿ ಧ್ವನಿ, ಲತಾ, ಆಶಾ, ರಫಿ, ಮುಕೇಶ್ ಮುಂತಾದವರ ಹಾಡುಗಳಲ್ಲಿನ "ಭಾವ"ಕ್ಕೆ ಮಾರು ಹೋಗಿ (Lyrics ಈಗೆಲ್ಲಿದೆ? ಬರಿ ಶಬ್ದ, ಗದ್ದಲ) ಅದರ ಅರ್ಥ ಹಿಂದಿ ಕಲಿತು, ತಿಳಿದುಕೊಳ್ಳಬೇಕೆಂಬ ಕುತೂಹಲ! 'ಮುಂಬಯಿ' ಎಂದರೆ ನಾನು ಸ್ವರ್ಗ ಎಂದು ಅಂದುಕೊಂಡಿದ್ದೆ! ಸಿನಿಮಾ ನಕ್ಷತ್ರಗಳು, ಹಾಡುಗಳ ಹಾಡಿರುವ ಈ ಕಲಾವಿದರು ಇರುವ ಸ್ಥಳ! ನಾನು ಮುಂದೆ ಇದೇ ಮುಂಬಯಿನಲ್ಲಿ ಒಂದು ದಶಕಗಳ ಕಾಲ ನಿಮ್ಮಂತಹ ಸ್ನೇಹ ಜೀವಿಗಳೊಡನೆ ಕಳೆಯುತ್ತೇನೆಂದು ನಾನು ಎಂದೋ ಕಂಡ ಕನಸು ನನಸಾಗಿದ್ದು ನನ್ನ ಸೌಭಾಗ್ಯವೇ ಸರಿ!

ನನ್ನ ಜೀವನದ ಹಾದಿಯಲ್ಲಿ ಸುಳಿದ ಎಷ್ಟೋ ಮಂದಿಗೆ ನನ್ನ ಪ್ರಣಾಮಗಳನ್ನು, ಕೃತಜ್ಞತೆಗಳನ್ನು ಈ ಲೇಖನದ ಮೂಲಕ ತಿಳಿಸಲು ಅವಕಾಶ ಒದಗಿಸಿದವರಿಗೆ ನಮೋನಮಃ!

**– ವನಜಾ ರಾಜನ್**

# ತ. ಸು. ಶಾಮರಾಯ

ಡಾ. ಪ್ರಭುಶಂಕರ

ಶಾಮರಾಯರು ನನ್ನ ಗುರುಗಳು. ಅವರನ್ನು ನೆನೆದರೆ ರೋಮಾಂಚನವಾಗುತ್ತದೆ. ಜೊತೆಗೆ ಕಣ್ಣು ಹನಿತುಂಬಿ ಹೃದಯ ಭಾರವಾಗುತ್ತದೆ. ಅಂಥವರನ್ನು ಕುರಿತು ಇತರರನ್ನು ಕುರಿತು ಬರೆದಂತೆ ಒಂದು ಜೀವನಚರಿತ್ರೆಯನ್ನು ಬರೆಯುವುದು ಸುಲಭವಾದ ಕೆಲಸವಲ್ಲ. ನಾನೂ, ನನ್ನಂತಹ ನೂರಾರು ಜನರೂ ಒಂದು ದೊಡ್ಡ ಕಾದಂಬರಿಯಂತಹ ಅವರ ಜೀವನದ ಜೀವಂತ ಪಾತ್ರಗಳು. ಹೀಗಾಗಿ ಒಂದು ಮಾನಸಿಕ ದೂರವನ್ನು ಕಲ್ಪಿಸಿಕೊಂಡು ಅವರ ಜೀವನ ಮತ್ತು ಕೃತಿಗಳನ್ನು, ಅವುಗಳಿಗೆ ಅಗತ್ಯವಾದ ವಸ್ತುನಿಷ್ಠೆಯಿಂದ ನೋಡುವ ಸಾಧ್ಯತೆಯಿದೆಯೇ ಎಂಬ ಪ್ರಶ್ನೆ ನನ್ನನ್ನು ಸದಾ ಕಾಡುತ್ತಿರುತ್ತದೆ. ಹಾಗೆ ನೋಡಿದರೆ ಅವರ ವಾತ್ಸಲ್ಯ, ಔದಾರ್ಯಗಳು ನನಗಷ್ಟೇ ವಿಶಿಷ್ಟವಾಗಿ ದೊರೆತವಲ್ಲ. ಅದೇ ಪ್ರಮಾಣದಲ್ಲಿ, ಏಕೆ ಅನೇಕ ಸಲ ಅದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ, ಅವನ್ನು ಪಡೆದವರಿದ್ದಾರೆ. ಆದ್ದರಿಂದ ಅನೇಕ ಕಣ್ಣುಗಳೂ, ಹೃದಯಗಳೂ ನನ್ನ ಅನುಭವಗಳನ್ನು, ಅದಕ್ಕೆ ನಾನು ನೀಡುತ್ತಿರುವ ಶಬ್ದ ಕಾಯವನ್ನು ಎಚ್ಚರಿಕೆಯಿಂದ ಗಮನಿಸುತ್ತವೆ ಎಂಬ ಅರಿವಿನಿಂದ ಇಂಥದ್ದೊಂದು ಕೃತಿ ರಚನೆಯ ಸಾಹಸಕ್ಕೆ ಕೈಹಾಕುತ್ತಿದ್ದೇನೆ.

ಶಾಮರಾಯರು ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನ ತಳುಕು ಎಂಬ ಗ್ರಾಮದಲ್ಲಿ 1906ನೆಯ ಇಸವಿ ಜೂನ್ ತಿಂಗಳ ಹನ್ನೆರಡರಂದು ಹುಟ್ಟಿದರು. ನೆನಪಿಟ್ಟುಕೊಳ್ಳಲು ಸುಲಭ ಎಂಬಂತೆ ಹೇಳಬೇಕಾದರೆ 12.06.1906 ಅವರ ಜನ್ಮ ದಿನಾಂಕ, ಕೃಷ್ಣಜನ್ಮಾಷ್ಟಮಿಯ ದಿನ ಹುಟ್ಟಿದ್ದರಿಂದ ಮಗುವಿಗೆ ಕೃಷ್ಣ ಎಂದೇ ನಾಮಕರಣ ಮಾಡಲು ತಂದೆ–ತಾಯಿಯರು ಯೋಚಿಸಿದ್ದರು. ಆದರೆ ಈಗಾಗಲೇ ಆ ಹೆಸರಿನ ಮಗ ಇದ್ದುದರಿಂದ ಇವರಿಗೆ ಶಾಮರಾಯ ಎಂದು ಹೆಸರಿಟ್ಟರು. ಅವರು ಹುಟ್ಟಿದ ವಂಶದ ತುಂಬ ಸಾಹಿತಿಗಳೇ. ತಂದೆ ಸುಬ್ಬಣ್ಣನವರು, ತಾಯಿ ಲಕ್ಷ್ಮೀದೇವಮ್ಮ ದಂಪತಿ ಉದಾರ ಚರಿತರು. ಧಾರಾಳತನ ಅವರ ವಂಶದ ರಕ್ತದಲ್ಲೇ ಹರಿಯುತ್ತಿತ್ತು. ಅವರ ಮನೆ ಒಂದು ಛತ್ರ. “ಛತ್ರದ ಸುಬ್ಬಣ್ಣನವರು” ಎಂದೇ ಅವರು ಪ್ರಸಿದ್ಧರಾಗಿದ್ದರು. ಜೊತೆಗೆ ಸಾಹಿತ್ಯಾಸಕ್ತಿಯೂ ಅವರನ್ನು ವಿಶಿಷ್ಟ ವ್ಯಕ್ತಿಯನ್ನಾಗಿ ಮಾಡಿತ್ತು. ಅವರು ಕುಳಿತಲ್ಲಿಯೇ ಸಾಹಿತ್ಯ ರಚನೆ ಮಾಡಬಲ್ಲವರಾಗಿದ್ದರು. ವೃತ್ತಿಯಲ್ಲಿ ಶಾನುಭೋಗರು. ಅದರಿಂದ ಬರುತ್ತಿದ ಆದಾಯ – ಆ ಕಾಲದಲ್ಲಿ ಅದನ್ನು “ಪೋಟಿಗೆ” ಎಂದು ಕರೆಯುತ್ತಿದ್ದರು – ತೀರ ಕಡಿಮೆ. ಇಬ್ಬರ ಅನ್ನ ಬಟ್ಟೆಗೂ ಸಾಕಾಗುತ್ತಿರಲಿಲ್ಲ. ಅಂಥದ್ದರಲ್ಲಿ ಅವರು ಹನ್ನೆರಡು ಮಕ್ಕಳನ್ನೂ, ಮನೆಗೆ ಬಂದು ಹೋಗುತ್ತಿದ್ದ ಲೆಕ್ಕವಿಲ್ಲದಷ್ಟು ಜನರನ್ನೂ ಹೇಗೆ ನಿರ್ವಹಿಸುತ್ತಿದ್ದರೋ ತಿಳಿಯದು. ತ. ಸು. ಶಾಮರಾಯರ ದೊಡ್ಡ ಮಗ, ದೊಡ್ಡಪ್ಪನವರ ಹೆಸರನ್ನೇ ಹೊತ್ತ ತ.ಶಾ.ವೆಂಕಣ್ಣಯ್ಯ ಬರೆಯುತ್ತಾರೆ:

“ಶ್ರೀರಾಮನಲ್ಲಿ ಅಚಲ ಭಕ್ತಿ. ನಿಷ್ಠೆಯುಳ್ಳವರಾಗಿದ್ದ ಅವರು ಎಲ್ಲವೂ ರಾಮನ ಇಚ್ಛೆ ಎಂದು ನಂಬಿದ್ದ ಪರಮ ಭಾಗವತರು. ಅವರ ಮನೆಯಲ್ಲಿ ದಿನದ ಊಟಕ್ಕೂ ಕಾಳಿಲ್ಲದ ಪರಿಸ್ಥಿತಿ ಸರ್ವೇಸಾಮಾನ್ಯವಾಗಿತ್ತು. ಅಂತಹ ಸಂದರ್ಭದಲ್ಲಿ ಹೆಂಡತಿ ಅವರಲ್ಲಿ ತಮ್ಮ ಆತಂಕವನ್ನು ವ್ಯಕ್ತಪಡಿಸಿದಾಗ ಆತ “ರಾಮುಡುನ್ನಾಡೇ” (ರಾಮನಿದ್ದಾನೆ) ಅನ್ನುತ್ತಿದ್ದನಂತೆ. ಅಂತೆಯೇ ರಾಮ ಅವರನ್ನೆಂದೂ ಕೈಬಿಡಲಿಲ್ಲ. ಶ್ರೀರಾಮಾಯಣ ಪಾರಾಯಣ ಸುಬ್ಬಣ್ಣನವರಿಗೆ ನೇಮ. ತಾಯಿ ಲಕ್ಷ್ಮೀದೇವಮ್ಮ ಆಗಿನ ಕಾಲಕ್ಕೆ ಸಾಕಷ್ಟು ಕಲಿತವರಾಗಿದ್ದು ಪುರಾಣ, ರಾಮಾಯಣಗಳನ್ನು ನಿತ್ಯವೂ ಪಾರಾಯಣ ಮಾಡುತ್ತಿದ್ದರು. ಪತಿಗೆ ತಕ್ಕ ಸತಿಯಾಗಿದ್ದರು ಆಕೆ. ಹನ್ನೆರಡು ಜನ ಮಕ್ಕಳ ದೊಡ್ಡ ಸಂಸಾರವನ್ನು ಸಮರ್ಥವಾಗಿ ನಿಭಾಯಿಸುತ್ತಿದ್ದ ಆಕೆ ಪತಿಯಂತೆಯೇ ಪರಮಸಾತ್ವಿಕಳು; ಸಾಹಿತ್ಯಾಭಿಮಾನ, ತಂದೆ–ತಾಯಿಯರ ಸಾಹಿತ್ಯಾಸಕ್ತಿ ಎಲ್ಲ ಮಕ್ಕಳ ಮೇಲೂ ಪರಿಣಾಮ ಬೀರಿತ್ತಾದರೂ ದಿ.ಟಿ.ಎಸ್.ವೆಂಕಣ್ಣಯ್ಯನವರ ಹಾಗೂ ನನ್ನ ತಂದೆಯವರ ಮೇಲೆ ಬೀರಿದ ಪರಿಣಾಮ ಮಹತ್ತರವಾದುದು. ಬಡಕುಟುಂಬದಲ್ಲಿ ಜನಿಸಿದ ನಮ್ಮ ತಂದೆಯವರ ಬಾಲ್ಯ ಸಹಜವಾಗಿಯೇ ಕಷ್ಟಕಾರ್ಪಣ್ಯಗಳಿಂದ ತುಂಬಿತ್ತು. ಎಂಟನೆಯ ವಯಸ್ಸಿಗೇ ಅವರಿಗೆ ಇಡೀ ಅಮರಕೋಶ ಬಾಯಿಪಾಠವಾಗಿತ್ತು. ಮನೆಯ ವಾತಾವರಣ, ಸುಬ್ಬಣ್ಣನವರ ಧಾರ್ಮಿಕ ಪ್ರವಚನಗಳ ಸತತ ಶ್ರವಣಗಳಿಂದಾಗಿ, ಇತರರಿಗೆ ಹೊಸದಾಗಿ ತೋರುತ್ತಿದ್ದ ಅನೇಕ ಧಾರ್ಮಿಕ ವಿಚಾರಗಳು ನನ್ನ ತಂದೆಯವರಿಗೆ ಬಾಲ್ಯದಲ್ಲಿಯೇ ಸರ್ವೇಸಾಮಾನ್ಯವಾಗಿ ತೋರುತ್ತಿದ್ದವು.”

ಇಂತಹ ಕಷ್ಟದ ಪರಿಸರದಲ್ಲಿ ಬೆಳೆಯುತ್ತಿದ್ದ ಶಾಮರಾಯರಿಗೆ ಜೀವನ ಇನ್ನೂ ಕಷ್ಟತರವಾದದ್ದು ಅವರು ಹನ್ನೆರಡು ವರ್ಷ ವಯಸ್ಸಿನವರಾಗಿದ್ದಾಗಲೇ ಅವರ ತಂದೆ ಸುಬ್ಬಣ್ಣನವರು 1918 ರಲ್ಲಿ ತೀರಿಕೊಂಡಾಗ. ಮೊದಲೇ ಆರ್ಥಿಕವಾಗಿ ದುರ್ಬಲವಾಗಿದ್ದ ದೊಡ್ಡ ಸಂಸಾರ, ಈ ಆಘಾತದಿಂದ ಇನ್ನೂ ಹೆಚ್ಚಿನ ಸಂಕಟಕ್ಕೆ ಸಿಕ್ಕಿಕೊಂಡಿತು. ಶಾಮರಾಯರ ದೊಡ್ಡ ಯೋಚನೆಯೆಂದರೆ ವಿದ್ಯಾಭ್ಯಾಸ ಮುಂದುವರಿಸುವುದು ಹೇಗೆ ಎಂದು. ಅವರ ಅಣ್ಣ ರಾಮಸ್ವಾಮಿಯುವರು ಹರಿಹರ ತಾಲ್ಲೂಕಿನ ಮಲೆಬೆನ್ನೂರಿನಲ್ಲಿ ಶೇಕ್‌ದಾರರಾಗಿದ್ದರು. ಅವರಲ್ಲಿ ಆಶ್ರಯ ಪಡೆದ ಶಾಮರಾಯರು 1919ರಲ್ಲಿ ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು. ಮುಂದಕ್ಕೆ ಓದುವ ಆಸೆ ತುಂಬ ಇದ್ದರೂ ಅದಕ್ಕೆ ಅವಕಾಶ ದೊರಕಲಿಲ್ಲ. ಬದಲಿಗೆ ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ್ದರಾಗಿ ಪ್ರೈಮರಿ ಸ್ಕೂಲಿನಲ್ಲಿ ಪಾಠ ಹೇಳುವ ಹುದ್ದೆ ಸಿಕ್ಕಿತು! ತಾವು ಪ್ರೈಮರಿ ಸ್ಕೂಲಿನಲ್ಲಿ ಮೇಷ್ಟ್ರಾದ ಸಂದರ್ಭದಲ್ಲಿ ನಡೆದುದನ್ನು ಶಾಮರಾಯರು ತಮ್ಮದೇ ಆದ ಹಾಸ್ಯಮಿಶ್ರಿತ ಶೈಲಿಯಲ್ಲಿ ಹೀಗೆ ಹೇಳುತ್ತಿದ್ದರು: “ಕೇವಲ ಒಂದು ನಿಕ್ಕರ್, ನೆಟ್ ಬನಿಯನ್ ಶಾಮರಾಯರ ಅಂದಿನ ದಿರುಸು. ಹಾಕಿಕೊಳ್ಳಲು ಒಂದು ಒಳ್ಳೆಯ ಶರಟೂ ಇಲ್ಲ. ಮೊದಲ ದಿನ ಸ್ಕೂಲಿಗೆ ಹೋಗುವಾಗ ಅಣ್ಣನ ಶರಟು ಹಾಕಿಕೊಂಡು ಹೋಗುವಂತೆ ಮನೆಯವರ ಒತ್ತಾಯ”. ಹುಡುಗನೋ ತುಂಬ ಸ್ವಾಭಿಮಾನಿ, ಆ ಏರ್ಪಾಡಿಗೆ ಒಪ್ಪಲಿಲ್ಲ. ಅಣ್ಣ ಕೃಷ್ಣರಾಯರು ಚೆನ್ನಾಗಿ ಬಡಿದರು. ಆಗ ಇವರು ಮನೆ ಬಿಟ್ಟು ಓಡಿಹೋದರಂತೆ! ಹಿರಿಯರು ಬಿಟ್ಟಾರೆಯೇ? ಹೋಗಿ ಹುಡುಕಿ ಎಳೆತಂದು ನಾಲ್ಕು ಬಿಗಿದು ಅಳುತ್ತಿದ್ದ ಮೇಷ್ಟರನ್ನು ವಿದ್ಯಾರ್ಥಿಗಳ ಮುಂದೆ ಕುಕ್ಕರಿಸಿದರಂತೆ!

ಎರಡು ವರ್ಷಗಳ ನಂತರ ಮೇಷ್ಟ್ರಿಗೇ ಬೇಕಿಲ್ಲದಿದ್ದ ಮೇಷ್ಟ್ರಗಿರಿ ಹೋಯಿತು. ಆಗ ಅವರ ವಯಸ್ಸು ಹದಿನಾಲ್ಕು. ಚಳ್ಳಕೆರೆಗೆ ಹೋಗಿ ಐದು ವರ್ಷಗಳಲ್ಲಿ ಓದಿ ಮುಗಿಸಬೇಕೆಂದಿದ್ದ ಇಂಗ್ಲೀಷ್ ಲೋಯರ್ ಸೆಕೆಂಡರಿಯನ್ನು ಒಂದೇ ವರ್ಷದಲ್ಲಿ ಓದಿ ಮುಗಿಸಿ, ತೇರ್ಗಡೆಯಾಗಿ ತಳುಕಿಗೆ ಹಿಂದಿರುಗಿದರು. ಈ ಮಧ್ಯೆ ಅವರ ಅಣ್ಣ ರಾಮಸ್ವಾಮಿಯುವರು ಚಿತ್ರದುರ್ಗದಲ್ಲಿ ನ್ಯಾಯವಾದಿಗಳಾಗಿ ನೆಲಸಿದ್ದರು. ಅವರ ಮನೆಯಲ್ಲಿದ್ದುಕೊಂಡು ಶಾಮರಾಯರು ತಮ್ಮ ಹೈಸ್ಕೂಲಿನ ವಿದ್ಯಾಭ್ಯಾಸವನ್ನು ಮುಂದುವರಿಸಿದರು. ಅವರ ಮತ್ತೊಬ್ಬ ಅಣ್ಣ ಶ್ರೀ ತಳುಕಿನ ವೆಂಕಣ್ಣಯ್ಯನವರು ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಕನ್ನಡ ವಿಭಾಗದಲ್ಲಿ ಉಪಪ್ರಾಧ್ಯಾಪಕರಾಗಿದ್ದರು. ಅವರ ಒಪ್ಪಿಗೆ ಪಡೆದು ಅವರೊಡನಿದ್ದು ಶಾಮರಾಯರು ಬೆಂಗಳೂರಿನ ನ್ಯಾಷನಲ್ ಸ್ಕೂಲಿಗೆ ಸೇರಿ 1926ರಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು. ಮುಂದಕ್ಕೆ ಓದುವ ಅಪೇಕ್ಷೆ ಎಷ್ಟೇ ಇದ್ದರೂ ಅಣ್ಣನ ಅನುಮತಿ ದೊರೆಯಲಿಲ್ಲವಾಗಿ, ದಾವಣಗೆರೆಯ ಬಳಿಯ ಆಲೂರಿನ “ಅಪೂರ್ಣ ಮಾಧ್ಯಮ ಶಾಲೆಯ” ಮುಖ್ಯೋಧ್ಯಾಪಾಧ್ಯಾಯರಾಗಿ ಕೆಲಸಕ್ಕೆ ಸೇರಿದರು. ಒಂಬತ್ತು ತಿಂಗಳ ಕಾಲ ಅಲ್ಲಿ, ಸ್ವಯಂಪಾಕ ಮಾಡಿಕೊಂಡು ಕಾಲ ಹಾಕಿದರು. ಅಲ್ಲಿನ ಜನರಿಗೋ ತಮ್ಮ ಊರಿಗೆ ಮಹಾ ವಿದ್ವಾಂಸರೊಬ್ಬರು ಬಂದಿದ್ದಾರೆಂದು ಹೆಮ್ಮೆ. ಆ ಊರಿನಲ್ಲಿ ಕಳೆದ ಆರು ತಿಂಗಳು ತಮ್ಮ ಜೀವನದ ಅತ್ಯಂತ ಸುಖದ ಕಾಲ ಎಂದು ಶಾಮರಾಯರು ಹೇಳುತ್ತಿದ್ದರು. 1927ರಲ್ಲಿ ಶಾಮರಾಯರು

ದಾವಣಗೆರೆಯ ಮಾಧ್ಯಮಿಕ ಶಾಲೆಯಲ್ಲಿ ಖಾಯಂ ಉಪಾಧ್ಯಾಯರ ಹುದ್ದೆಗೆ ನೇಮಕಗೊಂಡರು. ಅಲ್ಲಿ ಅವರು ಮೂರು ವರ್ಷಗಳ ಕಾಲ ಇದ್ದರು. 'ಟ್ಯೂಷನ್' ನಿಂದ ಆ ಕಾಲಕ್ಕೇ ಅವರಿಗೆ ನೂರು ರೂಪಾಯಿ ಸಂಭಾವನೆ ದೊರಕುತ್ತಿತ್ತು!

ಶಾಮರಾಯರ ಜೀವನದಲ್ಲಿ ಒಂದು ಮುಖ್ಯವಾದ, ಮಂಗಳಕರವಾದ ಘಟನೆ ನಡೆದದ್ದು ಅವರು ಆಲೂರಿನಲ್ಲಿದ್ದಾಗ. ಶ್ರೀಮತಿ ಸುಬ್ಬಲಕ್ಷ್ಮಿಯವರೊಡನೆ ಅವರ ಮದುವೆ ನಡೆಯಿತು. ನಮಗೆಲ್ಲ ಅವರು ಗುರುಪತ್ನಿ ಮಾತ್ರವಲ್ಲ, ಸದಾ ಮುಕ್ತಹಸ್ತದ ಅನ್ನಪೂರ್ಣೆಯಾಗಿದ್ದರು. ಅತಿಥಿ ಸತ್ಕಾರದಲ್ಲಿ ಎಣೆಯೇ ಇಲ್ಲದವರೆಂದು ಶಾಮರಾಯರಿಗೆ ಬಂದ ಕೀರ್ತಿಯಲ್ಲಿ ಬಹುಪಾಲು ಅವರಿಗೆ ಸಲ್ಲತಕ್ಕದ್ದು. ತಮ್ಮಲ್ಲಿ ವಾರಕ್ಕೆ ಬರುವ ವಿದ್ಯಾರ್ಥಿಗಳಿಗೆ ತಾಯಿಯಂತೆ ಇದ್ದರೆಂದು ಅವರು ಕೀರ್ತಿ ಪಡೆದರು.

1930ರಲ್ಲಿ ಓದು ಮುಂದುವರೆಸುವಂತೆ ಅಣ್ಣ ವೆಂಕಣ್ಣಯ್ಯನವರಿಂದ ಶಾಮರಾಯರಿಗೆ ಅಪ್ಪಣೆ ಬಂತು. ಅದರಂತೆ ಮೈಸೂರಿಗೆ ಬಂದು ಯುವರಾಜ ಕಾಲೇಜು ಸೇರಿ ಕನ್ನಡ, ಸಂಸ್ಕೃತ, ತರ್ಕಶಾಸ್ತ್ರಗಳನ್ನು ಆಯ್ದುಕೊಂಡು ಇಂಟರ್ಮೀಡಿಯೆಟ್‌ಗೆ ಸೇರಿದರು. ಆ ಪರೀಕ್ಷೆಯಲ್ಲಿ ನಾಲ್ಕನೆಯ ರ್‍ಯಾಂಕ್ ಪಡೆದು ತೇರ್ಗಡೆ ಹೊಂದಿದರು. ಕನ್ನಡದಲ್ಲಿ ಶೇಕಡ 80 ಅಂಕಗಳನ್ನು ಪಡೆದಿದ್ದುದು ಅವರ ವೈಶಿಷ್ಟ್ಯ. ಗುರುಗಳಾದ ತೀ.ನಂ. ಶ್ರೀಕಂಠಯ್ಯನವರು, ರಜೆಯಲ್ಲಿ ತಳುಕಿಗೆ ವೆಂಕಣ್ಣಯ್ಯನವರಿಗೆ ಪತ್ರ ಬರೆದು ತಮ್ಮ ಶಿಷ್ಯನ ಪ್ರೌಢಿಮೆಯನ್ನು ಕೊಂಡಾಡಿದರು.

ಇಂಟರ್ಮೀಡಿಯೆಟ್‌ನ ಅನಂತರ ಮತ್ತೆ ಉದ್ಯೋಗ, ಚಿತ್ರದುರ್ಗದ ಮಾಧ್ಯಮಿಕ ಶಾಲೆಯಲ್ಲಿ. ಅಲ್ಲಿ ನಿಷ್ಕಾರಣವಾಗಿ ಮೇಲಧಿಕಾರಿಗಳೊಂದಿಗೆ ವಿರಸ. ಅದರಿಂದ ಅಂತಿಮವಾಗಿ ಶಾಮರಾಯರಿಗೆ ಒಳ್ಳೆಯದೇ ಆಯಿತು. 1936 ರಲ್ಲಿ ವೆಂಕಣ್ಣಯ್ಯನವರು ತಮ್ಮನನ್ನು ಮೈಸೂರಿಗೆ ಕರೆಸಿಕೊಂಡು ಮಹಾರಾಜ ಕಾಲೇಜಿನಲ್ಲಿ ಬಿ.ಎ. ಆನರ್ಸ್ ತರಗತಿಗೆ ಸೇರುವಂತೆ ಹೇಳಿದರು.

ಇಲ್ಲಿಂದ ಮುಂದೆ ಶಾಮರಾಯರ ಭಾಗ್ಯದ ಬಾಗಿಲು ತೆರೆಯಿತು. ಆರ್ಥಿಕವಾಗಿ ಅನುಕೂಲವಾಯಿತು ಎಂದಲ್ಲ. ಅಂದಿನ ಮಹಾರಾಜ ಕಾಲೇಜಿನ ಪಂಡಿತೋತ್ತಮರು, ಟಿ.ಎಸ್.ವೆಂಕಣ್ಣಯ್ಯನವರು, ಆಚಾರ್ಯ ಬಿ.ಎಂ.ಶ್ರೀಕಂಠಯ್ಯನವರು, ಡಿ.ಎಲ್.ನರಸಿಂಹಾಚಾರ್ಯರು, ತೀ.ನಂ.ಶ್ರೀಕಂಠಯ್ಯನವರು, ಪ್ರಿನ್ಸಿಪಲ್ ಜೆ.ಸಿ.ರಾಲೋ ಮುಂತಾದ ಮಹಾ ವಿದ್ವಾಂಸರು ಶಾಮರಾಯರಿಗೆ ಗುರುಗಳಾಗಿ ದೊರೆತರು. ಅಷ್ಟು ಮಾತ್ರವಲ್ಲ, ಮೇಲೆ ಇವರೆಲ್ಲರ ಪ್ರೀತಿ, ವಿಶ್ವಾಸ, ಪ್ರಶಂಸೆಗಳಿಗೆ ಪಾತ್ರರಾಗಿದ್ದ ಕವಿ ಕುವೆಂಪುರವರು ಶಾಮರಾಯರನ್ನು ಅಜೀವ ಪರ್ಯಂತ ಪ್ರೀತಿಸಿ ಪ್ರಶಂಸಿಸುವ ಗುರುಗಳಾದರು. 1940 ರಲ್ಲಿ ಬಿ.ಎ. ಆನರ್ಸ್ ಪರೀಕ್ಷೆಯಲ್ಲಿ ಅತಿ ಹೆಚ್ಚಿನ ಅಂಕಗಳನ್ನು ಪಡೆದು ಪ್ರಥಮ ವೈಸ್ ಛಾನ್ಸಲರ್ ಎಚ್.ವಿ ನಂಜುಂಡಯ್ಯನವರ ಚಿನ್ನದ ಪದಕವನ್ನು ಗಳಿಸಿದರು.

ಶಾಮರಾಯರ ವಿಶ್ವವಿದ್ಯಾಲಯ ಸೇವೆ ಶಿವಮೊಗ್ಗೆಯ ಸರ್ಕಾರಿ ಕಾಲೇಜಿನಲ್ಲಿ ಪ್ರಾರಂಭವಾಯಿತು. 1940 ರಿಂದ 1943 ರವರೆಗೆ ಅವರು ಅಲ್ಲಿ ಹಂಗಾಮಿ ಕನ್ನಡ ಅಧ್ಯಾಪಕರಾಗಿದ್ದರು. ಆ ಮೂರು ವರ್ಷಗಳು ಉದ್ಯೋಗದ ದೃಷ್ಟಿಯಿಂದ ಅವರಿಗೆ ಸೌಕರ್ಯವನ್ನು ಒದಗಿಸಿದ್ದರೂ, ಸಾಂಸಾರಿಕವಾಗಿ ಅವು ಅವರಿಗೆ ತುಂಬ ಕಷ್ಟದ ದಿನಗಳು. 1943 ರಲ್ಲಿ ಅವರ ಹಂಗಾಮಿ ಲೆಕ್ಚರರ್ ಹುದ್ದೆ ಹೋಯಿತು. ಅದೇ ವರ್ಷ ಅವರ ಮಾವನವರು ನಿಧನರಾದರು. ಬಂಧುಬಾಂಧವರು ತುಂಬಿ ತುಳುಕುತ್ತಿದ್ದ ಅವರ ಮನೆಯಲ್ಲಿದ್ದ ಜನಸಂಖ್ಯೆ ಹದಿನಾರು. ಅವರೆಲ್ಲರಿಗೂ ಶಾಮರಾಯರೇ ಪೋಷಕರು. 1941 ರಲ್ಲಿ ಪುತ್ರನ ಜನನ. ಅದೊಂದೇ ಈ ಕಷ್ಟ ಪರಂಪರೆಗಳ ನಡುವೆ ಅವರು ಕಂಡ ಸಂತಸ. ಅನೇಕ ರೀತಿಯ ದುಃಖಗಳು, ನೋವು, ಪ್ರೊ.ಎ.ಆರ್.ಕೃಷ್ಣಶಾಸ್ತ್ರಿಗಳ ಹಣ ತರಿಸಿಕೊಂಡು ಮೈಸೂರಿಗೆ ಸಂಸಾರಸಮೇತ ಪ್ರಯಾಣ ಮಾಡಿದರು. ಅಲ್ಲಿ ಆರು ತಿಂಗಳ ಕಾಲ ಮಹಾರಾಜ ಹೈಸ್ಕೂಲಿನಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸಿದರು. 1944 ರಲ್ಲಿ ಅವರಿಗೆ, ಪ್ರೊ.ಎ.ಆರ್. ಕೃಷ್ಣಶಾಸ್ತ್ರಿಗಳ ನೆರವಿನಿಂದ ಯುವರಾಜ ಕಾಲೇಜಿನಲ್ಲಿ ಅಧ್ಯಾಪಕರ ಹುದ್ದೆ ದೊರೆಕಿತು. ಅದೂ ಕೂಡ ಯಥಾಪ್ರಕಾರ ಹಂಗಾಮಿ ಹುದ್ದೆಯೇ.

ಈ ಮಧ್ಯೆ ನಡೆದ ಪವಾಡ ಸದೃಶವಾದ ಒಂದು ಘಟನೆಯನ್ನು ನನ್ನ ಗುರುಗಳಾದ ಶಾಮರಾಯರು ನನಗೆ ತಿಳಿಸಿದರು, ಅದು ನಡೆದು ಕೆಲವು ವರ್ಷಗಳ ಅನಂತರ, ಒಂದು ರಾತ್ರಿ, ಸುಮಾರು ಒಂಬತ್ತು ಗಂಟೆಯ ವೇಳೆಗೆ, ವಿಶ್ವವಿದ್ಯಾನಿಲಯದ ಕಛೇರಿಯಲ್ಲಿ ಮ್ಯಾನೇಜರ್ ಆಗಿದ್ದ ಶ್ರೀಮಾನ್ ಶಂಕರಲಿಂಗಯ್ಯನವರು ತ.ಸು.ಶಾಮರಾಯರನ್ನು ಹುಡುಕಿಕೊಂಡು ಅವರ ಮನೆಗೆ ಹೋದರು. ಶಾಮರಾಯರು ವಿದ್ಯಾರ್ಥಿ ಸಮುದಾಯದಲ್ಲಿ ಆ ಹೊತ್ತಿಗಾಗಲೇ ತಮ್ಮ ಪಾಠಪ್ರವಚನಗಳಿಂದ, ಶಿಷ್ಯವಾತ್ಸಲ್ಯದಿಂದ, ದೇವತಾಪುರುಷರಾದ ತಳುಕಿನ ವೆಂಕಣ್ಣಯ್ಯನವರ ತಮ್ಮ ಎಂಬ ಕಾರಣದಿಂದಲೂ ಇರಬಹುದು, ತುಂಬ ಪ್ರಖ್ಯಾತರಾಗಿದ್ದರು. ಈ ಘಟನೆ ನಡೆಯುವ ವೇಳೆಗೆ ವೆಂಕಣ್ಣಯ್ಯನವರು ತೀರಿಕೊಂಡಿದ್ದರು. ಶಾಮರಾಯರಿಗೆ ವಿಶ್ವವಿದ್ಯಾನಿಲಯದ ಹಿರಿಯ ಅಧಿಕಾರಿಯೊಬ್ಬರು (ಅವರನ್ನು ನಾನೂ ಖುದ್ದಾಗಿ ಬಲ್ಲವನಾಗಿದ್ದೆ) ತಮ್ಮನ್ನು ಹುಡುಕಿಕೊಂಡು ಮನೆಗೇ ಬಂದದ್ದು ಆಶ್ಚರ್ಯಕರವಾಗಿ ಕಂಡಿತು; ಸ್ವಲ್ಪಮಟ್ಟಿನ ಗಾಬರಿಯನ್ನೂ ಹುಟ್ಟಿಸಿತು. ಶಂಕರಲಿಂಗಯ್ಯನವರು ನೇರವಾಗಿ ವಿಷಯಕ್ಕೆ ಬಂದರು, ಹೇಳಿದರು: 'ಶಾಮರಾಯರೇ ನಿಮ್ಮ ಅಧ್ಯಾಪಕ ಹುದ್ದೆಗೆ ಇದೇ ಕಡೆಯ ರಾತ್ರಿ. ನಾಳೆ ಬೆಳಗ್ಗೆ ನಿಮಗೆ ರಿಲೀವಿಂಗ್ ಆರ್ಡರ್ ಬರುತ್ತೆ. ನಿಮ್ಮ ಸ್ಥಾನಕ್ಕೆ ಬೇರೆಯವರು ನೇಮಕಗೊಂಡಿದ್ದಾರೆ.''

ಶಾಮರಾಯರಿಗೆ ಸಿಡಿಲು ಬಡಿದಂತಾಯಿತು. ಕಷ್ಟನಷ್ಟಗಳ ಕೂಪದಿಂದ ಅವರಿನ್ನೂ ಮೇಲಕ್ಕೆ ಬಂದಿರಲಿಲ್ಲ. ಈಗ ಇಂತಹ ಪರಿಸ್ಥಿತಿ! ತಾವು ಮಾಡಿದ ತಪ್ಪು ಏನು ಎಂಬುದಾಗಲಿ, ತಾವು ಆ ಪರಿಸ್ಥಿತಿಯನ್ನು ನಿವಾರಿಸಿಕೊಳ್ಳುವ ವಿಧಾನವಾಗಲಿ ಅವರಿಗೆ ಹೊಳೆಯಲಿಲ್ಲ. ಅಂತಹ ದುರ್ವಾರ್ತೆಯನ್ನು ತಂದ ಅಧಿಕಾರಿಯನ್ನೇ ಅವರು ಪರಿಹಾರೋಪಾಯವನ್ನು ತಿಳಿಸಿಕೊಡುವಂತೆ ಕೋರಿದರು. ಶಂಕರಲಿಂಗಯ್ಯನವರು ಹೇಳಿದರು: ''ಅದನ್ನು ದಾರಿಯುದ್ದಕ್ಕೂ ಯೋಚಿಸುತ್ತಲೇ ಬಂದಿದ್ದೇನೆ. ನೀವು ಈಗಿಂದೀಗ ಸುತ್ತೂರು ಮಠಕ್ಕೆ ಹೋಗಿ. ಅಲ್ಲಿ ಪೂಜ್ಯರಾದ ಶಿವರಾತ್ರಿ ರಾಜೇಂದ್ರ ಸ್ವಾಮಿಗಳು ಇದ್ದಾರೆ. ಅವರಿಗೆ ಪ್ರಣಾಮ ಮಾಡಿ ವಿಷಯ ತಿಳಿಸಿ. ಅವರು ಈ ರಾತ್ರಿಯೇ ವೈಸ್ ಛಾನ್ಸಲರ್ ಜೊತೆ ಮಾತನಾಡಿದರೆ ನಿಮಗೆ ಒಳ್ಳೆಯದಾಗಬಹುದು.'' ಶಾಮರಾಯರಿಗೆ ಇನ್ನೂ ಭಯವಾಯಿತು. ''ಇಂಥ ರಾತ್ರಿಯಲ್ಲೇ? ನನಗೆ ಸ್ವಾಮೀಜಿಯವರ ದರ್ಶನ ದೊರೆಯುತ್ತದೆಯೇ? ದೊರೆತರೂ ಅವರು ವೈಸ್‌ಛಾನ್ಸಲರನ್ನು, ಅದೂ ಇಷ್ಟು ರಾತ್ರಿಯಲ್ಲಿ ನೋಡಲು ಹೋಗುತ್ತಾರೆಯೇ?'' ಧೈರ್ಯ ತುಂಬುವ ದನಿಯಲ್ಲಿ ಶಂಕರಲಿಂಗಯ್ಯನವರು ಹೇಳಿದರು: ''ಕೇಳಿ, ಪೂಜ್ಯ ರಾಜೇಂದ್ರ ಸ್ವಾಮಿಯವರು ಪರಮದಯಾಳು. ನಿಮ್ಮ ವಿಷಯದಲ್ಲಿ, ತಮ್ಮ ವಿದ್ಯಾರ್ಥಿಗಳ ಮೂಲಕ ತಿಳಿದುಕೊಂಡು, ತುಂಬ ವಿಶ್ವಾಸ ಇಟ್ಟಿದ್ದಾರೆ. ನೀವು ಈಗಿಂದೀಗಲೇ ಹೋಗಿ ಅವರನ್ನು ಕಾಣಲೇಬೇಕು.''

ಕವಿದಿದ್ದ ಕತ್ತಲೆಯಲ್ಲಿ ಶಾಮರಾಯರಿಗೆ ಕಂಡ ಆಶಾಕಿರಣ ಅದೊಂದೇ. ಅವರು ನಡೆದುಕೊಂಡು ಹೋಗಿ ಮಠ ತಲುಪಿದರು. ಅವರ ನೆರೆಹೊರೆಯಲ್ಲಿ ಬೇರಾವ ವಾಹನ ಸೌಕರ್ಯವೂ ದೊರೆಯುವಂತಿರಲಿಲ್ಲ. ಪೂಜ್ಯರ ದರ್ಶನ ದೊರೆಯಿತು. ಅವರಿಗೆ ಪ್ರಣಾಮ ಸಲ್ಲಿಸಿ ತಮ್ಮ ಕಷ್ಟವನ್ನು ವಿವರಿಸಿದರು. ಸ್ವಾಮೀಜಿ ಬೇರೆ ಮಾತನ್ನೇ ಆಡಲಿಲ್ಲ. ಆಗಿಂದಾಗಲೇ ತಮ್ಮ ಕಾರನ್ನು ತರಿಸಿ ಶಾಮರಾಯರನ್ನು ಕೂರಿಸಿಕೊಂಡು ವೈಸ್ ಛಾನ್ಸಲರವರ ಬಂಗಲೆಗೆ ಹೋದರು. ಹೊರಗೆ ಕಾವಲು ಕಾಯುತ್ತಿದ್ದ ವ್ಯಕ್ತಿ ಸ್ವಾಮೀಜಿಯವರನ್ನು ಕಂಡು ಕಾಲಿಗೆ ಬಿದ್ದರು. ಸ್ವಾಮೀಜಿ ''ನಾವು ವೈಸ್‌ಛಾನ್ಸಲರ್ ಅವರನ್ನು ಕಾಣಬೇಕು'' ಎಂದರು. ಅವರು ''ಬುದ್ಧಿ, ನಮ್ಮ ಸಾಹೇಬರು ನಿದ್ರೆ ಮಾಡುತ್ತಿದ್ದಾರೆ. ಅವರನ್ನು ಈಗ ನೋಡುವಂತಿಲ್ಲ. ಮಾಫ್ ಮಾಡಬೇಕು'' ಎಂದರು. ಸ್ವಾಮೀಜಿ: ''ಅಯ್ಯಾ, ತುಂಬ ತುರ್ತು ಕೆಲಸ. ಅವರನ್ನು ನೋಡಲೇಬೇಕು, ಏಳಿಸು'' ಎಂದರು. ಅವರು: ''ಬುದ್ಧಿ, ತಮ್ಮ ಮಾತು ಕೇಳಿಕೊಂಡು ಅವರನ್ನು ಏಳಿಸಿದರೆ ನನ್ನ ಚಾಕರಿ ಹೋಗುತ್ತದೆ, ಮಕ್ಕಳೊಂದಿಗ'' ಎಂದರು. ಬುದ್ಧಿಯವರು

ಹೇಳಿದರು: "ಅಪ್ಪಾ, ಹಾಗೇನೂ ಆಗದಂತೆ ನೋಡಿಕೊಳ್ಳುತ್ತೇವೆ. ನಿಮ್ಮ ವೈಸ್‌ಛಾನ್ಸಲರ್ ನಮಗೆ ಬೇಕಾದವರು. ನಾವು ಅವರಿಗೆ ಹೇಳುತ್ತೇವೆ. ಹೋಗಿ ಏಳಿಸು" ಎಂದರು. ಯಾವ ಧೈರ್ಯದಿಂದಲೋ ಆತ ಮಹಡಿ ಹತ್ತಿಹೋದ. ಹತ್ತುಹದಿನೈದು ನಿಮಿಷಗಳಲ್ಲಿ ವೈಸ್‌ಛಾನ್ಸಲರ್ ಅವರು ರಾತ್ರಿಯುಡುಪಿನಲ್ಲೇ ಕೆಳಕ್ಕೆ ಇಳಿದು ಬಂದರು. ಆ ಅವೇಳೆಯಲ್ಲಿ ಅವರು ಸುತ್ತೂರು ಸ್ವಾಮಿಯವರನ್ನು ಕಂಡು ತಮ್ಮ ಕಣ್ಣುಗಳನ್ನು ತಾವೇ ನಂಬದಾದರು. ಸ್ವಾಮೀಜಿಗೆ ಭಕ್ತಿಯಿಂದ ನಮಸ್ಕರಿಸಿ, "ಸ್ವಾಮೀಜಿ, ನೀವೇಕೆ ಇಷ್ಟು ಹೊತ್ತಿನಲ್ಲಿ ಇಲ್ಲಿಗೆ ಬಂದಿರಿ? ಹೇಳಿಕಳುಹಿಸಿದ್ದರೆ ನಾನೇ ಬರುತ್ತಿದ್ದೆ, ಎಂದರು. ಎಲ್ಲರೂ ಕುಳಿತುಕೊಂಡ ಮೇಲೆ ಸ್ವಾಮೀಜಿ ಪರಿಸ್ಥಿತಿಯನ್ನು ವಿವರಿಸಿದರು. ವೈಸ್‌ಛಾನ್ಸಲರ್-ಬಹುಶಃ ಶ್ರೀ ಕಸ್ತೂರಿ ರಾಜಶೆಟ್ಟಿಯವರು - ಹೇಳಿದರು: "ಸ್ವಾಮೀಜಿ, ನಾನು ದಿವಂಗತ ವೆಂಕಣ್ಣಯ್ಯನವರ ಕೀರ್ತಿಯನ್ನು ಕೇಳಿದ್ದೇನೆ. ಈ ಶಾಮರಾಯರ ಪಾಠಪ್ರವಚನಗಳ ವಿಷ್ಯಯ, ವಿದ್ಯಾರ್ಥಿ ಪ್ರೇಮ ಇವು ನನ್ನ ಕಿವಿಗೆ ಬಿದ್ದಿವೆ. ಜೊತೆಗೆ ತಾವೇ ಈ ಸರಿರಾತ್ರಿಯಲ್ಲಿ ಇಲ್ಲಿಯವರೆಗೆ ದಯಮಾಡಿಸಿದ್ದೀರಿ. ಇನ್ನು ಇವರಿಗೆ ನೌಕರಿ ಹೋಗುವ ಭಯ ಬೇಡಿ. ನಾಳೆ, ಬೆಳಗ್ಗೆಯೇ ಈಗಾಗಿರುವುದನ್ನು ಸರಿಪಡಿಸಿ ಇವರ ಹುದ್ದೆ ಉಳಿಸುತ್ತೇನೆ."

ವೈಸ್‌ಛಾನ್ಸಲ್‌ರ್ ಆಶ್ವಾಸನೆ ಕಾರ್ಯರೂಪಕ್ಕೆ ಬಂತು. ಶಾಮರಾಯರ ಹುದ್ದೆ ಉಳಿಯಿತು. ಸ್ವಾಮಿಯವರ ಪರೋಪಕಾರ ಬುದ್ಧಿಯನ್ನು, ಹೃದಯ ವೈಶಾಲ್ಯವನ್ನು, ಶಂಕರಲಿಂಗಯ್ಯನವರು ತಮಗೆ ಸಹಾಯ ಮಾಡಿದ ರೀತಿಯನ್ನು ಶಾಮಯರು ಪದೇ ಪದೇ ನೆನಪು ಮಾಡಿಕೊಳ್ಳುತ್ತಿದ್ದರು.

ಇಷ್ಟೆಲ್ಲ ಆದರೂ ಶಾಮರಾಯರು ಬರೀ ಬಿ.ಎ. ಆನರ್ಸ್ ಪದವಿ ಪಡೆದಿದ್ದರೇ ವಿನಃ ಎಂ.ಎ. ಪದವಿ ಪಡೆದಿರಲಿಲ್ಲ. ತರಗತಿಗಳಿಗೆ ಹಾಜರಾಗದೆ ಎಂ.ಎ. ಪದವಿ ಪಡೆಯಲು ಆಗ ಪರ್ಯಾಯ ವ್ಯವಸ್ಥೆ ಇತ್ತು. ಅದೆಂದರೆ ಯಾವುದಾದರೂ ವಿಷಯವನ್ನು ಆರಿಸಿಕೊಂಡು ಆಳವಾದ ಅಧ್ಯಯನ ನಡೆಸಿ ಮಹಾಪ್ರಬಂಧ (ಥೀಸಿಸ್) ರಚಿಸುವುದು. ಆ ಕೆಲಸಕ್ಕೆ ತುಂಬ ದಕ್ಷರಾದ ವಿದ್ವಾಂಸರ ಮಾರ್ಗದರ್ಶನ ಬೇಕಾಗುತ್ತಿತ್ತು. ಶಾಮರಾಯರ ಪುಣ್ಯಕ್ಕೆ ಶ್ರೀ ಕುವೆಂಪು ಅವರ ಮಾರ್ಗದರ್ಶನವೇ ದೊರೆಯಿತು. ಶಾಮರಾಯರು "ಕನ್ನಡ ನಾಟಕಗಳು" ಎಂಬ ವಿಷಯವನ್ನು ಆರಿಸಿಕೊಂಡು ಮಹಾಪ್ರಬಂಧ ರಚಿಸಿ ಎಂ.ಎ. ಪದವಿ ಪಡೆದರು. ಅವರಿಗೆ ಅದಕ್ಕಾಗಿ ಕೇಣಿ ಸಿದ್ದಪ್ಪ ಚಿನ್ನದ ಪದಕವೂ ದೊರಕಿತು.

ಶಾಮರಾಯರು ವಹಿಸಿಕೊಂಡ ಮುಂದಿನ ಅಧಿಕಾರ, ಕುವೆಂಪುರವರ ಹೃದಯಕ್ಕೆ ತುಂಬ ಹತ್ತಿರವಾಗಿದ್ದ "ಪ್ರಸಾರಾಂಗ" ಎಂಬ ಸಂಸ್ಥೆಯ ನಿರ್ದೇಶಕತ್ವ. 1952 ರಲ್ಲಿ ಆ ಹುದ್ದೆಯನ್ನು ವಹಿಸಿಕೊಂಡ ಶಾಮರಾಯರು 1960 ರವರೆಗೂ ಅಲ್ಲಿ ಸೇವೆ ಸಲ್ಲಿಸಿದರು. ಅವರ ಅಧಿಕಾರಾವಧಿಯಲ್ಲಿ ನೂರಾರು ಅತ್ಯುಪಯುಕ್ತವಾದ ಗ್ರಂಥಗಳು ಪ್ರಕಟಗೊಂಡವು. ಅನೇಕ ಪ್ರಚಾರೋಪ ನ್ಯಾಸಗಳೂ ಯಶಸ್ವಿಯಾಗಿ ನಡೆದುವು. ಹಲವಾರು ಜನ ಗಣ್ಯರು, ಉತ್ತರಪ್ರದೇಶದ ರಾಜ್ಯಪಾಲರಾಗಿದ್ದ ವಿ.ವಿ.ಗಿರಿಯವರು, ಲೋಕಸಭೆಯ ಸ್ಪೀಕರ್ ಆಗಿದ್ದ ಎಸ್. ವಿ. ಕೃಷ್ಣಮೂರ್ತಿರಾಯರು ಪ್ರಸಾರಾಂಗದ ಈ ಅವಧಿಯ ಕಾರ್ಯ ಚಟುವಟಿಕೆಗಳನ್ನು ಮುಕ್ತಕಂಠದಿಂದ ಪ್ರಶಂಸಿಸಿದ್ದಾರೆ.

ತಮ್ಮ ಸೇವಾವಧಿಯ ಕೊನೆಯ ಆರು ತಿಂಗಳುಗಳಲ್ಲಿ ಶಾಮರಾಯರು ಮೈಸೂರಿನ ವಿಶ್ವವಿದ್ಯಾನಿಲಯ ಗ್ರಂಥಾಲಯದ ಮುಖ್ಯ ಗ್ರಂಥಪಾಲಕರಾಗಿ ಸೇವೆ ಸಲ್ಲಿಸಿದರು. ಗ್ರಂಥಾಲಯದ ಸರ್ವತೋಮುಖವಾದ ಬೆಳವಣಿಗೆ ಅವರಿಂದ ನಡೆಯಿತು ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲವಷ್ಟೇ. ಮೂವತ್ತು ವರ್ಷಗಳಿಗೂ ಹೆಚ್ಚು ಕಾಲ ಸೇವೆ ಸಲ್ಲಿಸಿ ಶಾಮರಾಯರು 1960 ನೆಯ ಇಸವಿಯಲ್ಲಿ ವಿಶ್ವವಿದ್ಯಾನಿಲಯದಿಂದ ನಿವೃತ್ತರಾದರು. ಅಂದರೆ ಸಂಬಳ ನೀಡುವ ಉದ್ಯೋಗದಿಂದ ನಿವೃತ್ತರಾದರು, ಅಷ್ಟೇ. ಆದರೆ ಅವರ ಸಾಹಿತ್ಯ ಸೇವೆ ಹೆಚ್ಚು ಕಡಮೆ ಒಂದಲ್ಲ ಒಂದು ರೀತಿಯಲ್ಲಿ ಅವರು ತೀರಿಕೊಳ್ಳುವವರೆಗೂ — ಎಂದರೆ 21.08.1998ರ ವರೆಗೂ ನಡೆಯುತ್ತಲೇ ಇತ್ತು.

## ಪ್ರವೃತ್ತಿ

ಸ್ವಾಮಿ ವಿವೇಕಾನಂದರ ಒಂದು ಇಂಗ್ಲೀಷ್ ವಾಕ್ಯ ನನಗೆ ತುಂಬ ಪ್ರಿಯವಾಗಿದ್ದು ಅದನ್ನು ಲೆಕ್ಕವಿಲ್ಲದಷ್ಟು ಸಲ, ಲೆಕ್ಕವಿಲ್ಲದಷ್ಟು ಸಂದರ್ಭಗಳಲ್ಲಿ ಉದ್ಧರಿಸಿ ಹೇಳುತ್ತಲೇ ಇದ್ದೇನೆ. ಸ್ವಾಮಿ ವಿವೇಕಾನಂದರು ಮೈಸೂರಿನ ಮಹಾರಾಜರಾಗಿದ್ದ ಚಾಮರಾಜ ಒಡೆಯರ್ ಅವರಿಗೆ 22.06.1894 ರಂದು ಬರೆದ ಪತ್ರದಲ್ಲಿರುವ ವಾಕ್ಯ ಅದು: "My noble prince, this life is short, the vanities of the world are transient, but they alone live who live for others, the rest are more dead than alive". ಈ ಮಾತಿನ ಅರ್ಥ ಹೀಗಿದೆ: ಉದಾತ್ತಸ್ವಭಾವದ ಮಹಾರಾಜರೇ, ಬದುಕು ಅಲ್ಪಕಾಲಿಕವಾದದ್ದು. ಜಗತ್ತಿನ ಆಡಂಬರಗಳೆಲ್ಲ ಕ್ಷಣಿಕವಾದವು; ಆದರೆ ಯಾರು ಇತರರಿಗಾಗಿ ಬದುಕುತ್ತರೆಯೋ ಅವರು ಮಾತ್ರ ನಿಜವಾಗಿ ಸಜೀವವಾಗಿರುತ್ತಾರೆ, ಉಳಿದವರೆಲ್ಲ ಜೀವಚ್ಛವಗಳು.

ಶಾಮರಾಯರು ತಾವು ಅಧ್ಯಾಪಕರಾದ ಮೊದಲಲ್ಲಿ ಸ್ವಾಮಿ ವಿವೇಕಾನಂದರ ಈ ವಾಕ್ಯವನ್ನು ಓದಿದ್ದರೋ ಇಲ್ಲವೋ ತಿಳಿಯದು. ಆದರೆ ಅವರು ಉದ್ದಕ್ಕೂ ಬದುಕಿದ್ದುದು ಇತರಿರಿಗಾಗಿ ಮಾತ್ರವೇ. ನಾನು ಅವರ ಶಿಷ್ಯ ಮಾತ್ರನಲ್ಲ. ಅವರ ಆತ್ಮೀಯನೂ ಆಗಿದ್ದುದರಿಂದ ಅವರ ಸ್ವಭಾವದ ಪರಿಚಯ ನನಗೆ ಚೆನ್ನಾಗಿ ಆಗಿತ್ತು. ಅವರಿಗೆ ಸಹಜವಾಗಿ ಬಂದಿದ್ದ ಎರಡು ಗುಣಗಳಿದ್ದುವು. ಒಂದು ಶಿಷ್ಯವಾತ್ಸಲ್ಯ. ಎರಡನೆಯದು ಔದಾರ್ಯ. ಇವೆರಡನ್ನೂ ಕೆಲವು ಘಟನೆಗಳ ಮೂಲಕ ವಿವರಿಸಬೇಕಾಗಿದೆ.

ನಾನು ಅನೇಕ ವರ್ಷಗಳ ಕಾಲ ಅಧ್ಯಾಪಕನಾಗಿದ್ದವನು, ನನ್ನಂತೆ ಅಧ್ಯಾಪಕರಗಿದ್ದ ಅನೇಕರನ್ನು ಕಂಡವನು. ಆದ್ದರಿಂದ ಶಾಮರಾಯರಲ್ಲಿದ್ದು ನಮ್ಮಲ್ಲಿ ಅನೇಕರಲ್ಲಿ ಇಲ್ಲದಿದ್ದ ಒಂದು ಗುಣವನ್ನು ನಾನು ಸುಲಭವಾಗಿ ಗುರುತಿಸಬಲ್ಲೆ. ಯಾವುದೋ ರೀತಿಯಲ್ಲಿ ಶಾಮರಾಯರ ಅಗತ್ಯವಿದೆಯೆಂಬುದನ್ನು ಅವರ ಅಂತಃ ಪ್ರಜ್ಞೆಗೆ ತಲುಪಿಸುತ್ತಿದ್ದ ವಿದ್ಯಾರ್ಥಿಯನ್ನು ಅವರು ಬಹು ಸುಲಭವಾಗಿ ಕಂಡುಹಿಡಿದುಬಿಡುತ್ತಿದ್ದರು. ತಾವೇ ಬಹುಕಾಲ ಕಷ್ಟಗಳ ಪರಂಪರೆಯೊಡನೆ ಬಾಳಿದವರಾಗಿದ್ದುದರಿಂದಲೋ ಏನೋ ತಮ್ಮ ವಿದ್ಯಾರ್ಥಿಯ ಯಾತನೆಯನ್ನು ಸೂಕ್ಷ್ಮಗ್ರಾಹಿಯಾದ ಅವರ ಚಿತ್ತಫಲಕ ತನಗೆ ತಾನೇ ರೇಖಿಸಿಕೊಳ್ಳುತ್ತಿತ್ತು ಎಂದು ಕಾಣುತ್ತದೆ. ಹಾಗೆ ರೇಖಿಸಿಕೊಂಡ ಕೂಡಲೇ ಶಾಮರಾಯರು, ಅಂಥ ವಿದ್ಯಾರ್ಥಿ ತಮ್ಮನ್ನು ಸಮೀಪಿಸುವ ಮೊದಲೇ ತಾವಾಗಿಯೇ ಅವನ ಬಳಿಗೆ ಧಾವಿಸಿ, ಅವನಲ್ಲಿ ಯಾವ ಕೀಳರಿಮೆಯೂ ಮೂಡದಂತೆ ಅವನನ್ನು ತಮ್ಮ ವಾತ್ಸಲ್ಯರಕ್ಷೆಯೊಳಕ್ಕೆ ಸೆಳೆದುಕೊಳ್ಳುತ್ತಿದ್ದರು. ಅಂತಹ ಒಂದೆರಡು ನಿದರ್ಶನಗಳನ್ನು ಹಾಗೆ ಉಪಕೃತರಾದವರ ಮಾತುಗಳನ್ನೇ ಉದ್ಧರಿಸಿ ನಿರೂಪಿಸುತ್ತೇನೆ.

ಡಾ. ನ.ಸುಬ್ರಹ್ಮಣ್ಯಂ ಶಾಮರಾಯರ ಪ್ರೀತಿಯ ಶಿಷ್ಯರಲ್ಲಿ ಒಬ್ಬರು. ಇನ್ನು ಮುಂದೆ "ಪ್ರೀತಿಯ ಶಿಷ್ಯ" ಎಂದು ಬರೆಯುವುದಿಲ್ಲ. ಏಕೆಂದರೆ ಎಲ್ಲ ಶಿಷ್ಯರೂ ಅವರಿಗೆ ಪ್ರೀತಿಯ ಶಿಷ್ಯರೇ. ಅವರು ಶಿಷ್ಯರ ನಡುವೆ ಎಂದೂ ಯಾವ ರೀತಿಯಲ್ಲೂ ಭೇದಭಾವ ಮಾಡಿದ್ದೇ ಇಲ್ಲ. ಎಲ್ಲರೂ ಅವರಿಗೆ ಅತ್ಯಂತ ಪ್ರೀತಿಯ ಮಕ್ಕಳೇ. ಅದೇ ಭಾವನೆ, ಆ ಶಿಷ್ಯರಲ್ಲೂ ತಕ್ಷಣವೇ ಹುಟ್ಟಿಕೊಳ್ಳುತ್ತಿತ್ತು! ಸುಬ್ರಹ್ಮಣ್ಯಂ ಶಾಮರಾಯರನ್ನು ಕುರಿತು ಬರೆದಿರುವ ಮಾತುಗಳನ್ನು ಉದ್ಧರಿಸುತ್ತೇನೆ.

"ತ.ಸು.ಶಾ. ಅವರು ಎಂದೂ ಸ್ವಂತಕ್ಕಾಗಿ ಪರಿತಪಿಸಿದವರಲ್ಲ. ಪರೋಪಕಾರಾರ್ಥಮಿದಂ ಶರೀರಂ! ಸರ್ವದಾ ಪರಹಿತ ಚಿಂತನೆಯಲ್ಲೇ ನಿರತರು. ಒಂದು ಸಲ ನನ್ನೊಡನೆ ಎಂದಿದ್ದರು. 'ನೋಡು ಮಗು, ನಮ್ಮ ಸುಖವನ್ನೇ ನಾವು ನೋಡಿಕೊಳ್ಳ ಹೊರಟರೆ ಇತರರಿಗೆ ಏನೊಂದೂ ಮಾಡಲಾಗುವುದಿಲ್ಲಪ್ಪ. ನಮಗೆ ಕಮ್ಮಿ ಮಾಡಿಕೊಂಡು ಇತರರಿಗೆ ಕೊಡಬೇಕು!" ಇದೇ ಅವರ ಜೀವನ ದರ್ಶನ."

'ಮನೆಯಲ್ಲಿ ಕಾಫಿಪುಡಿಯಿಲ್ಲ, ತರಿಸಬೇಕು' ಎಂದು ಮನೆಯಾಕೆ ಕುಗ್ಗಿದ ಧ್ವನಿಯಲ್ಲಿ, ಹೊರಗೆ ಹೊರಟು ನಿಂತ ಯಜಮಾನರಿಗೆ ಹೇಳಿದರೆ

'ನೆನ್ನೆ ತಾನೇ ಕಾಲುಪೌಂಡು ಕಾಫಿಪುಡಿ ತರಿಸಿಕೊಟ್ಟೆ, ಇಷ್ಟು ಬೇಗ ಆಗಿಯೋಯಿತೇ? ಎಷ್ಟು ತಂದು ಪೂರೈಸುವುದಕ್ಕಾಗುತ್ತೆ ಈ ಮನೆಯಲ್ಲಿ?'' ಎಂದೊಮ್ಮೆ ರೇಗಿದ್ದುಂಟು. ಆ ಮಾತುಗಳಿಗೆ ಏನು ಅರ್ಥವೋ? ಅದಕ್ಕೆ ಅಳಬೇಕೋ? ನಗಬೇಕೋ? ಹಾಗೆ ಹೇಳಿ ಹತ್ತು ಮಾರು ಆಚೆ ಹೋದಾಗ ಒಬ್ಬ ಬಡ ವಿದ್ಯಾರ್ಥಿ ಕೈ ಹೊಸೆಯುತ್ತ ವಿನಯದಿಂದ ಪರೀಕ್ಷೆಗೆ ಕಟ್ಟಲು ಹಣವಿಲ್ಲವೆಂದು ಬೇಡಿಕೆ ಮುಂದಿಟ್ಟಾಗ 'ಎಷ್ಟು ಬೇಕೋ ಮಗು?' ಎಂದು ಮರುಮಾತಾಡದೆ ಒಂದು ಚೆಕ್ಕು ಬರೆದುಕೊಟ್ಟರು! ಇಂಥ ಘಟನೆಗಳೆಷ್ಟೋ!''

''ಬಡ ವಿದ್ಯಾರ್ಥಿಗಳಿಗಂತೂ ಅವರೊಂದು ಕಲ್ಪತರು. ಕಷ್ಟಗಳನ್ನು ಹೇಳಿಕೊಂಡರೆ ಬೇಗ ಕರಗಿಹೋಗುತ್ತಿದ್ದರು.''

''ಆರ್ಥಿಕ ಸಹಾಯದ ಮಾತಂತಿರಲಿ, ತ್ರಿಕರಣಪೂರ್ವಕವಾಗಿ ಅವರು ಇತರರಿಗೆ ಮಾಡಿರುವ ಸಹಾಯ ಮಾತಿಗೆ ನಿಲುಕದುದು, ಅಂತಃಕರಣೈಕವೇದ್ಯವಾದುದು. ಸಾವುನೋವುಗಳಿಂದ ಬಳಲಿದ ಎಷ್ಟು ಚೇತನಗಳಿಗೆ ಅವರು ಅಮೃತಸಿಂಚನ ಮಾಡಿದ್ದಾರೋ! ನನ್ನ ತಂದೆಯವರು ತೀರಿಕೊಂಡ ಪ್ರಸಂಗವನ್ನಂತೂ ನಾನು ಮರೆಯುವಂತಿಲ್ಲ. ರಾತ್ರಿ ಎಂಟುಗಂಟೆಯ ಸಮಯದಲ್ಲಿ ತಂದೆಯವರು ತೀರಿಕೊಂಡರು. ನನಗೆ ದಿಕ್ಕುತೋಚದಂತಾಯಿತು. ದುಃಖವನ್ನು ಯಾರಲ್ಲಿ ಹೇಳಿಕೊಳ್ಳಬೇಕು? ನನ್ನ ಬಾಳದೀವಿಗೆಯಾಗಿದ್ದ ಗುರುಗಳಲ್ಲಿ ಹೋಗಿ ವಿನಂತಿಸಿಕೊಂಡೆ. ಅವರಿಗೋ ನನ್ನಲ್ಲಿ ಸ್ವಪುತ್ರಾತಿಶಯವಾದ ವಾತ್ಸಲ್ಯ.ಅದೇ ತಾನೇ ಹೊರಗಿನಿಂದ ಬಂದಿದ್ದರು. ವಿಷಯ ತಿಳಿದು ಮರುಕಗೊಂಡರು. ಆದರೂ ತೋರಗೊಡದೆ ''ನಡಿ, ಹೋಗೋಣ'' ಎಂದು ಉಟ್ಟ ಬಟ್ಟೆಯಲ್ಲೇ ಹೊರಟು ನಿಂತರು.

''ತಾವು ಊಟಮಾಡಿ ಬನ್ನಿ'' ಎಂದೆ.

''ಎಲ್ಲಾದರೂ ಉಂಟೆ? ಚೆನ್ನಾಗಿ ಹೇಳಿದೆ: 'ನಡಿ ನಡಿ' ಎಂದು ನನ್ನನ್ನು ಹೊರಡಿಸಿಕೊಂಡು ಹೊರಟರು. ಆ ರಾತ್ರಿ ಸ್ಮಶಾನದಲ್ಲಿ ಶವ ಸಂಸ್ಕಾರವನ್ನು ಮುಗಿಸಿ ಆಪಾದಮಸ್ತಕ ತಣ್ಣೀರಿನಲ್ಲಿ ಸ್ನಾನ ಮಾಡಿ ಅವರು ಒಂಟಿಯಾಗಿ ಮನೆಗೆ ಹಿಂತಿರುಗಿದುದು ರಾತ್ರಿ ಎರಡು ಗಂಟೆಗೆ!''

ಶಾಮರಾಯರ ಅಚ್ಚು ಮೆಚ್ಚಿನ ಶಿಷ್ಯ ರಾಷ್ಟ್ರಕವಿ ಜಿ.ಎಸ್.ಶಿವರುದ್ರಪ್ಪ ನವರು. ಶಾಮರಾಯರು ಅವರನ್ನು ಗುರುತಿಸಿದ್ದು ಒಂದು ಸಂಕಟದ ಸಮಯದಲ್ಲೇ. ಬಡತನದಿಂದ ಈತ ಬೆಂಡಾಗಿದ್ದಾನೆ, ಊಟ ತೊಂದರೆಯಾಗಿದೆ ಎಂಬುದನ್ನು ಗುರುಗಳು ತಮ್ಮ ಸೂಕ್ಷ್ಮ ಸಂವೇದನಾ ಶಕ್ತಿಯಿಂದ ಕಂಡುಹಿಡಿದುಕೊಂಡರು. ಮೊದಲು ತಾತ್ಕಾಲಿಕ ಪರಿಹಾರ, ಮುಂದಿನದು ಆಮೇಲೆ, ಮನೆಗೆ ಕರೆದುಕೊಂಡು ಹೋಗಿ ಊಟ ಹಾಕಿದರು. ಆನಂತರ ಇವರಿಗೆ ಮೊದಲೇ ಪರಿಚಿತವಾಗಿದ್ದ ಸುತ್ತೂರು ಜಗದ್ಗುರುಗಳಾದ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿಯವರ ಬಳಿ ಶಿಷ್ಯನನ್ನು ಕರೆದುಕೊಂಡು ಹೋದರು. ಶಿವರುದ್ರಪ್ಪನವರ ವಿಷಯವನ್ನು ವಿವರಿಸಿದರು. ಸ್ವಾಮೀಜಿಯವರು ತಮಾಷೆಗೆ ಹೇಳಿದರು: ''ಏನು ಶಾಮರಾಯರೇ, ನೀವು ಬ್ರಾಹ್ಮಣರು. ಒಬ್ಬ ಲಿಂಗಾಯುತ ಹುಡುಗನ ಬಗ್ಗೆ ಶಿಫಾರಸು ಮಾಡಲು ಬಂದಿದ್ದಿರಲ್ಲ!'' ಮೇಷ್ಟ್ರು ಅಷ್ಟಕ್ಕೇ ಕೆರಳಿದರು: ''ಎಲ್ಲವಿದ್ಯಾರ್ಥಿಗಳೂ ನನ್ನ ಮಕ್ಕಳು. ಅವರಿಗೆ ಜಾತಿ ಗೀತಿ ಇಲ್ಲ.'' ಸ್ವಾಮಿಗಳು ನಕ್ಕು ಮೇಷ್ಟ್ರನ್ನ ಸಮಾಧಾನಪಡಿಸಿದರು. ಶಿವರುದ್ರಪ್ಪನವರಿಗೆ ಅನುಕೂಲ ಮಾಡಿಕೊಡುವುದಾಗಿ ಭರವಸೆ ಕೊಟ್ಟರು.

ಈ ಘಟನೆ ನಡೆದದ್ದು ಅರವತ್ತು ವರ್ಷಗಳ ಹಿಂದೆ. ಜಾತಿನೀತಿಗಳನ್ನು ಹೆಚ್ಚಿನ ಸಂಖ್ಯೆಯ ಜನರು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದ ಕಾಲದಲ್ಲಿ. ಆಗಲೇ ಶಾಮರಾಯರು ನಮ್ಮ ಕಣ್ಣಲ್ಲಿ ನೀತಿಗೊಮ್ಮಟರಾಗಿ ಕಾಣುತ್ತಿದ್ದುದ್ದಕ್ಕೆ ಕಾರಣ ಅವರು ಜಾತೀಯತೆಯನ್ನು ಮೀರಿ ನಿಂತಿದ್ದದ್ದು.

ನನಗೇ ಆದ ಒಂದು ಅನುಭವವನ್ನು ಹೇಳುತ್ತೇನೆ. 1947ರಲ್ಲಿ ನಾನಿನ್ನೂ ಮೊದಲನೆಯ ಆನರ್ಸ್ ವಿದ್ಯಾರ್ಥಿ. ಮಹಾರಾಜ ಕಾಲೇಜಿನ ಹಾಸ್ಟೆಲಿನಲ್ಲಿ ಊಟ, ವಸತಿ. ಕಾಲೇಜು ಪ್ರಾರಂಭವಾಗಿ ಕೆಲವೇ ತಿಂಗಳುಗಳಾಗಿದ್ದುವು. ತ.ಸು.ಶಾಮರಾಯರು ನಮಗೆ ಹರಿಹರನ ಶತಕಗಳನ್ನು ಪಾಠ ಹೇಳಲು ಬಂದರು; ಮೊದಲ ನೋಟಕ್ಕೆ ನಮ್ಮೆಲ್ಲರ ಮನಸ್ಸನ್ನು ಸೂರೆಗೊಂಡರು. ಹರಿಹರನ ಶತಕಗಳಲ್ಲಿ ಮಡುಗಟ್ಟಿ ನಿಂತಿದ್ದ ಭಕ್ತಿಯನ್ನು ತಾವೂ ಸವಿಯುತ್ತಲೇ ನಮ್ಮ ಹೃದಯಕ್ಕೂ ಹರಿಸಿದರು.

ಆನರ್ಸ್, ಎಂ.ಎ. ಮುಗಿಸಿ ನಾನೇನಾದರೂ ಆಗಬೇಕಲ್ಲವೇ? ಆಗುವುದಾದರೆ ಶಾಮರಾಯರಂಥ ಮೇಷ್ಟ್ರೇ ಆಗಬೇಕು ಎಂದು ಅಂದೇ ನಿರ್ಣಯಿಸಿದೆ. ಅವರ ಪಾಠದ ವೈಖರಿ ಅರವತ್ತು ವರ್ಷಗಳ ಅನಂತರವೂ (1947–2007!) ಮನಸ್ಸಿನಲ್ಲಿ ಇನ್ನೂ ಹಚ್ಚಹಸುರಾಗಿ ಉತ್ಸಾಹರೂಪಿಯೇ ಆಗಿ ಉಳಿದಿದೆ.

ಒಂದೆರಡು ತಿಂಗಳಲ್ಲೇ ತಿಳಿಯಿತು, ಶಾಮರಾಯರು ನನ್ನ ಆರಾಧ್ಯದೈವವೇ ಆಗಿದ್ದ ಕುವೆಂಪು ಅವರಿಗೆ ಪರಮಪೂಜ್ಯರಾಗಿದ್ದ ತಳುಕಿನ ವೆಂಕಣ್ಣಯ್ಯನವರಂಥ ದೇವತಾಸ್ವರೂಪಿಯ ತಮ್ಮ ಎಂದು. ಅಲ್ಲದೆ ಅವರು ಕುವೆಂಪು ಅವರ ಅಚ್ಚುಮೆಚ್ಚಿನ ಶಿಷ್ಯರೂ ಆಗಿದ್ದರು. ಎಲ್ಲ ಆನರ್ಸ್‌ಗಳ ವಿದ್ಯಾರ್ಥಿ, ವಿದ್ಯಾರ್ಥಿನಿಯರು, ಸುಮಾರು ನೂರೈವತ್ತು ಜನ ಸೇರುವ ದೊಡ್ಡ ತರಗತಿಯೊಂದಕ್ಕೆ ಸ್ವಲ್ಪ ಕಠಿಣವೇ ಎನ್ನಬಹುದಾದ ಪಠ್ಯವೊಂದನ್ನು ಬೋಧಿಸಲು ಕುವೆಂಪು ಶಾಮರಾಯರಿಗೆ ಹೇಳಿದರು. ಆಗ ಇವರು ತಮ್ಮ ಅಸಾಮರ್ಥ್ಯವನ್ನು ನಿವೇದಿಸಿಕೊಂಡಾಗ ಕುವೆಂಪು ಹೇಳಿದರು: ''ತರಗತಿಯಲ್ಲಿ ನಿಂತು, ಅದು ಗ್ಯಾಲರಿಯಿರುವ ಜೂನಿಯರ್ ಬಿ.ಎ. ಹಾಲ್, ನಿಮ್ಮ ಮೇಜಿನ ಮೇಲಿನ ಧೂಳನ್ನು ನೀವು ಊದಿಬಿಡಿ. ಅದೇ ವಿದ್ಯಾರ್ಥಿಗಳಿಗೆ ಯಥೇಚ್ಛವಾಗುತ್ತದೆ!''

ಅಂಥ ಅಧ್ಯಾಪಕರಿಗೆ ನಾನು ಬಹುಬೇಗ ಆಪ್ತ ವಿದ್ಯಾರ್ಥಿವರ್ಗದ ಸದಸ್ಯನಾಗಿಬಿಟ್ಟೆ. ನೋಡುತ್ತೇನೆ, ನನ್ನ ಗುಂಪಿನಲ್ಲಿ ಅನೇಕರು ನನಗಿಂತಲೂ ಆಗಲೇ ಭದ್ರವಾದ ಸ್ಥಾನ ಗಳಿಸಿಬಿಟ್ಟಿದ್ದರು. ಅವರಲ್ಲಿ ಕೆಲವರು ಜಿ.ಎಸ್.ಶಿವರುದ್ರಪ್ಪ, ಜಿ.ಬ್ರಹ್ಮಪ್ಪ, ನ.ಸುಬ್ರಹ್ಮಣ್ಯಂ ಇತ್ಯಾದಿ. ಕನ್ನಡ ವಿದ್ವತ್ ಪ್ರಪಂಚದಲ್ಲಿ ತುಂಬ ಹಿರಿಯರೆಂದು ಅದಾಗಲೇ ಹೆಸರು ಗಳಿಸಿದ್ದ ಶ್ರೀ ಎ. ಆರ್. ಕೃಷ್ಣಶಾಸ್ತ್ರಿಗಳು ಮತ್ತು ಡಿ.ಎಲ್.ನರಸಿಂಹಾಚಾರ್ಯರೂ ಆಗಾಗ ಶಾಮರಾಯರ ಮನೆಗೆ ಬರುತ್ತಿದ್ದರು.

ಅರವತ್ತು ವರ್ಷಗಳ ಅನಂತರವೂ ನೆನೆದರೆ ಭಯವನ್ನೂ, ರೋಮಾಂಚನವನ್ನೂ, ಆಶ್ಚರ್ಯವನ್ನೂ ಉಂಟುಮಾಡುವ ಸಂಗತಿಯೊಂದು ನಡೆಯಿತು. 1947ರ ಒಂದು ಸಂಜೆ ಶಾಮರಾಯರು ಮರುದಿನ ಬೆಳಗ್ಗೆ ಎಂಟು ಗಂಟೆಗೆ ಅವರ ಮನೆಗೆ, ಏನೂ ಆಹಾರ ಸ್ವೀಕರಿಸದೆ, ಬರುವಂತೆ ನನಗೆ ಅಪ್ಪಣೆ ಮಾಡಿದರು. ನಾನು ಹಾಗೆಯೇ ಮರುದಿನ ಬೆಳಗ್ಗೆ ಸಮಯಕ್ಕೆ ಸರಿಯಾಗಿ ಅವರ ಮನೆಗೆ ಹೋದೆ. ಅಲ್ಲಿ ನನಗೆ ಆಶ್ಚರ್ಯಕರವಾದ ದೃಶ್ಯವೊಂದು ಕಾದಿತ್ತು. ಒಂದು ಮಣೆ ಹಾಕಿ, ಅದರ ಮುಂದೆ ರಂಗೋಲಿ ಬಿಟ್ಟು, ದೀಪ ಹಚ್ಚಿಟ್ಟಿದ್ದರು. ಆ ಮಣೆಯ ಮೇಲೆ ಕೂರುವಂತೆ ಗುರುಗಳು ಹೇಳಿದರು. ಅದರ ಮುಂದೆ ಎಲೆ ಹಾಕಿ ಊಟ ಬಡಿಸಿದ್ದಾರೆ. ನಾನು ನಿಜವಾಗಿ ಮೂಕನಾದೆ. ಮುಂದಿನದನ್ನು ಬರೆಯಲು ಹನಿದುಂಬಿದ ಕಣ್ಣುಗಳು ಅವಕಾಶ ಕೊಡುತ್ತಿಲ್ಲ. ಗುರುಗಳು 'ಇವತ್ತು ಸುಬ್ರಾಯನ ಷಷ್ಠಿ. ಬ್ರಾಹ್ಮಣ ವಟುವಿಗೆ ಊಟ ಹಾಕಬೇಕು ಅಂತ ಇವತ್ತಿನ ಶಾಸ್ತ್ರ. ಅದಕ್ಕೇ ನಿನ್ನನ್ನು ಕರೆದೆ, ಕುತ್ಕೋ'' ಎಂದರು. ಅದು ಮುಖ್ಯವಲ್ಲ. ನಾನು ತಕ್ಷಣ ''ನಾನು ಬ್ರಾಹ್ಮಣ ಅಲ್ಲ'' ಎಂದು ಹೇಳಿಬಿಟ್ಟೆ. ''ಅವರು ನೀನು ನನ್ನ ವಿದ್ಯಾರ್ಥಿ. ಅಂದರೆ ನನ್ನ ಮಗ. ನೀನು ಬ್ರಾಹ್ಮಣ ಅಲ್ಲದಿದ್ದರೆ ಇನ್ನು ಯಾರು ಬ್ರಾಹ್ಮಣರು? ಸುಮ್ನೆ ಕುತ್ಕೋ'' ಎಂದರು. ಅವರು ಬ್ರಾಹ್ಮಣ ಎಂದದ್ದಿದ್ದರಿಂದ ನಾನು ಹೆಮ್ಮೆ ಪಡಲಿಲ್ಲ. ಆದರೆ ಅವರು, ಮಗುಟ ಉಟ್ಟು ಪೂಜೆಯ ವೇಷದಲ್ಲಿದ್ದವರು, ನನ್ನ ಕೈಹಿಡಿದು ಬಲವಂತವಾಗಿಯೇ ಆ ಮಣೆಯ ಮೇಲೆ ನನ್ನನ್ನು ಕುಳ್ಳಿರಿಸಿದರು. ವಟುಪೂಜೆ ನಡೆಯಿತು. ಅಷ್ಟು ಬೆಳಗ್ಗೆ ಬೆಳಗ್ಗೆಯೇ ಅದೇ ಮಣೆಯ ಮೇಲೆ ನಾನು ಕುಳಿತಿದ್ದಂತೆಯೇ ಊಟಕ್ಕೂ ಬಡಿಸಿದರು. ಗುರುವಿನಿಂದ ಪೂಜಿತನಾದ ಶಿಷ್ಯ ನಾನಾದೆ. ''ಎಲ್ಲಿಯ ಜಾತಿ, ಏನು ಕಥೆ'' ಎಂದು ಅವರು ತಮ್ಮ ಅಣ್ಣ ವೆಂಕಣ್ಣಯ್ಯನವರಂತೆ ಎಷ್ಟೋ ಸಲ ಹೆಳುತ್ತಿದ್ದರು. ನುಡಿದಂತೆ ನಡೆದ ಮಹಾತ್ಮರು ಅವರು.

ಈ ಮೇಲಿನ ವಿಷಯವನ್ನು ತ.ಸು.ಶಾಮರಾಯರೂ ಕೂಡ ತಾವು ನೀಡಿದ ಒಂದು ಸಂದರ್ಶನದಲ್ಲಿ ಪ್ರಸ್ತಾಪಿಸಿದ್ದಾರೆ.

*(ಮುಂದಿನ ಸಂಚಿಕೆಗೆ)*

# ಬೆಂಗಳೂರಿನಲ್ಲಿ ಅಸೋಸಿಯೇಷನ್ನಿನ ಕಲಾವಿದರು

ಭಾರತ ಸರ್ಕಾರದ MSME ಉದ್ಯೋಗ ನಿರ್ದೇಶಕರ ಕಾರ್ಯಾಲಯ, ಬೆಂಗಳೂರಿನಲ್ಲಿ ಇದೇ ಡಿಸೆಂಬರ್ 13, 14, 15 ರಂದು ತಮ್ಮ ಉದ್ಯೋಗ ಪ್ರದರ್ಶನವನ್ನು ರಾಜಾಜಿನಗರದಲ್ಲಿ ಜರುಗಿಸಿದ್ದರ ಅಂಗವಾಗಿ, ಕಾಸ್ಸಿಯಾ ರಂಗಭವನದಲ್ಲಿ ಒಂದು ಕಲಾ ಮನೋರಂಜನಾ ಸಂಜೆಯನ್ನು ಆಯೋಜಿಸಿದ್ದರು. ಈ MSME ಅವರ ನಿರ್ದೇಶಕರಾದ ಶ್ರೀ ಜಮಖಂಡಿಯವರು ಆದರದಿಂದ ಮೈಸೂರು ಅಸೋಸಿಯೇಷನ್ನಿನ ಕಲಾವಿದರನ್ನು ಬರಮಾಡಿಕೊಂಡಿದ್ದರ ಫಲವಾಗಿ ಅಸೋಸಿಯೇಷನ್ನಿನ ಕಲಾವಿದರು, ಒಂದು ಘಂಟೆಯ ಕಾಲ ಜಾನಪದ ಸಂಗೀತ ಅಸೋಸಿಯೇಷನ್ನಿನ ಕಲಾವಿದರು, ಒಂದು ಘಂಟೆಯ ಕಾಲ ಜಾನಪದ ಸಂಗೀತ ಹಾಗೂ ನೃತ್ಯಗಳನ್ನು ಪ್ರದರ್ಶಿಸಿ ಜನರ ಮನವನ್ನು ಸೂರೆಗೊಂಡರು.



ಗಣೇಶ ವಂದನೆಯಿಂದ ಮೊದಲಾದ ಕಾರ್ಯಕ್ರಮ ಕಂಸಾಳೆ, ವೀರಗಾಸೆ, ಪಟದ ಕುಣಿತ, ಗೊರವ ಕುಣಿತಗಳ ನಡುವಿನಲಿ,



ಗಂಧದ ನಿರಿಗ್ಸೋಳೆ, ನಂಗೆಣೆಯ ಚೆಂದಪ್ಪ ಇನ್ನೆಲ್ಲಿ ನೋಡಲಿಂಥಾ ಓದವ ನಮ್ಮಪ್ಪ, ಅವ್ವ ನಿನ್ನ ಮೊಗಚೆಂದ ಹಾಡುಗಳನ್ನು ದೃಶ್ಯಾವಳಿಯ ಮೂಲಕ ಹಾಡಿ ತೋರಿದರು ಕುಣಿತಗಳಂತೂ ಮನೋಹರವಾಗಿತ್ತು.

ನೃತ್ಯಗಳನ್ನು ಅಸೋಸಿಯೇಷನ್ನಿನ ಸದಸ್ಯರಾದ ಶ್ರೀಮತಿ ಸ್ನೇಹ ನಂದಕುಮಾರ್ ಅವರು ನಿರ್ದೇಶಿಸಿದ್ದರು. ಜಾನಪದ ಸಂಗೀತದ ತಂಡದಲ್ಲಿ, ಡಾ. ಮಂಜುನಾಥ್, ಶ್ರೀಮತಿ ಉಷಾ ಶ್ರೀಕಾಂತ್, ಶ್ರೀಮತಿ ಗಿರಿಜಾ, ಶ್ರೀ ರವಿಶಂಕರ್, ಶ್ರೀ ಗುರುದತ್ತ್ ರಾವ್, ಶ್ರೀ ನಾಗೇಶ ಬೆಳವಾಡಿಯವರು ಮನರಂಜಿಸಿದರು.

MSME ನಿರ್ದೇಶನಾಲಯದ ಸಹನಿರ್ದೇಶಕರಾದ ಶ್ರೀ ರಂಗಪ್ರಸಾದ್ ಅವರು ವಂದನಾರ್ಪಣೆಯನ್ನು ಮಾಡಿದರು.

**Dept. of Kannada University of Mumbai & The Mysore Association Bombay**

*Jointly present*

**MYSORE ASSOCIATION GOLDEN JUBILEE ENDOWMENTLECTURES - 2013**

**SATURDAY , 19.01.2013**

6.00 pm : **"Kavya Nritya"** - by NKES School Childrens
6.30 pm : **Endowment Lecture**
Speaker : Dr. H. S. Venkatesh Murthy
Noted Poet, Bangalore
SUBJECT : **MODERN KANNADA POETRY**

**Sunday, 20.01.2013**

11.00 a.m. : **"Book Release Function"**
by **Dr. H. S. Venkatesh Murthy**
Book 1 : **"Bendre Kavyada Kuhu Kuhu"**
Writer : **Dr. Chennaveera Kanavi**
Publication : Bendre Smaraka Trust Dharwad
Book 2 : **"Pustaka Mattu Navilugari"**
Writer : **Dr. Girija Shastri**
Publication : Abhinava Prakashana Bengaluru
11.30 a.m. : **Endowment Lecture**
Speaker : **Dr. H. S. Venkatesh Murthy**
Subject : **Me and my Contemporaries**

VENUE : **Mysore Association's Auditorium**
393, Bhau Daji Road, Matunga, Mumbai-400 019

***All are cordially invited***


**Dr. G. N. Upadhya**
*Head, Dept. of Kannada*
*University of Mumbai*

**Dr. Y.D. Venkatesh**
*Hon. Secretary*
*The Mysore Association, Bombay*

# Few Scenes of B. V. Karanth Drama Festival



*Shri. Sundar Raj and companions presenting 'Ranga geetegaLu' in Kannada on Day 2: Dec 9th 2012.*



*Dr. Rajaram released the second edition of 'Illiralaare Allige Hogalaare' book written by Smt. Vaidehi on Dec. 9th 2012. Holding the book in the pic. are Shri. Jairam Patil, Dr. B. V. Rajaaram, Shri. Umesh, Smt. Vaidehi, Shri. V. Ramabhadra.*




*Shri. Gopal Acharya and accompanists presenting 'Gokula Nirgamana'.*



*A scene from the play 'Shivaratri' enacted on Dec 9th 2012 by the Nirantara Troupe of Mysore. The play was written by Dr. Chandrasekhar Kambar.*



*Shri. K. Manjunathiah honouring Shri. Umesh. Dr. B. V. Rajaram looks on.*



*The President of the Mysore Association, Shri. V. Ramabhadra is releasing the December 2012 special issue of Nesaru on B. V. Karanth.*

Date of Publication : 10-01-2013 RNI No. 040015 / 83
MH / MR / North East / 093 / 2012- 2014 Date of Posting : 10-01-2013
at Mumbai Patrika Channel Sorting Office G.P.O.



# Few Scenes of B. V. Karanth Drama Festival



*Shri. Amod Krishna Bhat and troupe presenting the Rangasangeet in Hindi on Dec 8th 2012.*



*A scene from 'Hayavadana' being enjoyed by the crowded audience*



*A scene from the play 'Hayavadana' presented on Dec. 8th 2012.*



*The 'Nirantara ' Troupe giving a 'Ranga Sangeet' programme before the play 'Shivaratri'.*



*A scene from the Marathi play 'Gazab Kahani'*



*Shri. Manjunathiah honouring the chief of Doordarshan Mumbai for giving support to the festival by continuously covering the three days programme. The highlights of the programme were telecast on its weekly round up on 22nd Dec, 2012.*

Edited, Printed & Published by Mrs. Girija Shastry, On behalf of the Mysore Association, Mumbai. Tel.: 2402 4647 ● Fax : 2401 0574
Email : mysoreassociation.mumbai@gmail.com
Printed at Aarati Art Printers, Fort, Mumbai - 400 001. * 2266 3361 / 2266 5938